ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ದಲಿತ ಸಂವೇದನೆಯ ನೆಲೆಗಳು

ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಅಂತಿಮ ಸಂಶೋಧನಾ ಸಾರಲೇಖ

ಸಂಶೋಧಕರು

ಶ್ರೀನಿವಾಸಮೂರ್ತಿ

ನೋಂದಣಿ ವರ್ಷ– 2018

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಹಿರಿಯ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ, ಕೊಣಾಜೆ– 574199

2024

ಪ್ರಸ್ತಾವನೆ

ಜಗತ್ತಿನ ಮನುಕುಲದ ಇತಿಹಾಸದಲ್ಲಿ ಸಾಹಿತ್ಯ ಸೃಜಿಸುವ ಲೇಖಕರಿಗೆ ಅಗ್ರಗಣ್ಯ ಸ್ಥಾನವಿದೆ. ಏಕೆಂದರೆ ಸಾಹಿತ್ಯ ಸಮಾಜಮುಖಿಯಾದದ್ದು. ಜೊತೆಗೆ ಸಾಮಾಜಿಕ ಬದುಕಿನ ಪ್ರತಿಬಿಂಬವು ಹೌದು. ತಾನು ಕಂಡುಂಡ ಅನುಭವಗಳನ್ನು ಒಂದು ವಿಶಿಷ್ಟವಾದ ಪರಿಭಾಷೆಯಲ್ಲಿ ಹಿಡಿದಿಟ್ಟು. ತೆರೆದ ಕಣ್ಣುಗಳಿಂದ ಜಗತ್ತನ್ನು ನಿರೂಪಿಸುವ. ಅರ್ಥಮಾಡಿಸುವ ಕವಿ ಹೃದಯಕ್ಕೆ ಸೃಜನಶೀಲತೆಯು ಬಹು ವಿಸ್ಮಯಕಾರಿಯಾದದ್ದು. ಅಷ್ಟಾದಶವರ್ಣನೆಗಳಿಗೆ ಆರಂಭದಲ್ಲಿ ಹೆಚ್ಚು ಪ್ರಾಶಸ್ತ್ಯ ನೀಡಿದ ಸಾಹಿತ್ಯವು ತದನಂತರದ ಕಾಲಘಟ್ಟದಲ್ಲಿ ಮಾನವೀಯ ಮೌಲ್ಯಗಳ ಸಾಕಾರಕ್ಕಾಗಿಯೂ ಶ್ರಮಿಸಿತು. ಮನುಷ್ಯ ಮನುಷ್ಯರ ನಡುವೆ ಗಟ್ಟಿಯಾಗಿ ಬೇರೂರಿದ್ದ ಕಂದಕಗಳು, ಮೇಲು–ಕೀಳು, ಬಡವ–ಬಲ್ಲಿದ ಸ್ಪೃಶ್ಯ–ಅಸ್ಪೃಶ್ಯ ಎಂಬ ಕೀಳರಿಮೆಗಳನ್ನು ಧಿಕ್ಕರಿಸಿ ಸಹಬಾಳ್ವೆಯ, ಸಮಾನತೆಯ ಆಶಯಗಳಿಗಾಗಿ ಆಗ್ರಹಿಸುವ ಮಾರ್ಗವನ್ನು ಅಪ್ಪಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಹುಟ್ಟಿಕೊಂಡಿದ್ದು ದಲಿತಸಾಹಿತ್ಯ. 1970ರ ದಶಕದಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಮತ್ತು ಇತರೆ ದಲಿತ ಸಂಘಟನೆಗಳ ಹುಟ್ಟಿನೊಂದಿಗೆ ಕರ್ನಾಟಕದಲ್ಲಿಯೂ ಅಕ್ಷರ ಕಲಿತ ಮೊದಲ ತಲೆಮಾರಿನ ಜನರ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಚಳವಳಿ ಆರಂಭಿಸಿದರು. ಸಮಾಜದಲ್ಲಿ ಮನುಷ್ಯರು ಮನುಷ್ಯರನ್ನು ಮನುಷ್ಯರಂತೆ ಕಾಣುವಂತಾಗಬೇಕು ಎಂಬ ಆಶಯದ ಹಿನ್ನೆಲೆಯಲ್ಲಿ ದಲಿತರು ಸಾಹಿತ್ಯ ರಚನೆಯಲ್ಲಿ ತೊಡಗಿದರು. ಸಾಂವಿಧಾನಿಕ ಆಶಯಗಳ ನೆರವಿನಿಂದ ಶಿಕ್ಷಣ ಪಡೆದ ದಲಿತರು ತಲೆತಲಾಂತರದಿಂದ ತಮಗೆ ವ್ಯವಸ್ಥೆಯಿಂದ ಆಗಿರುವ ಅನ್ಯಾಯಗಳನ್ನು ಅರ್ಥಮಾಡಿಕೊಂಡು. ಅವುಗಳ ವಿರುದ್ಧ ಪ್ರತಿಭಟಿಸಲು ಲೇಖನಿಯನ್ನು ಅಸ್ತ್ರವಾಗಿಸಿಕೊಂಡರು.

ಆ ಮೂಲಕ ಸಮಾಜವನ್ನು ಎಚ್ಚರಿಸುವ ಕೈಂಕರ್ಯದಲ್ಲಿ ತೊಡಗಿಕೊಂಡರು. ಅಸಮಾನತೆ, ಅಸ್ಪೃಶ್ಯತೆ, ವರ್ಗ ತಾರತಮ್ಯ ಇವೆ ಮೊದಲಾದ ಸಾಮಾಜಿಕ ಅನಿಷ್ಟಗಳು ಸಮಾಜವನ್ನು ಬಾದಿಸುತ್ತಿರುವ ಪರಿಯನ್ನು ಅರ್ಥಮಾಡಿಕೊಂಡು ವಿದ್ಯಾವಂತರಾದ ಈ ಮೊದಲನೇ ತಲೆಮಾರಿನ ದಲಿತರನ್ನು ಎಚ್ಚರಿಸಿದವು. ಇಂತಹ ಶೈಕ್ಷಣಿಕ ಪರಿಸರವನ್ನು ಕೊಡಮಾಡಿದ ಬಾಬಾ ಸಾಹೇಬರ ಸಂವಿಧಾನವು ಎಲ್ಲರಿಂದಲೂ ಮಾನ್ಯತೆ ಪಡೆದುಕೊಂಡಿತ್ತು. ಒಂದು ಜನವರ್ಗದ ನಡುವೆ ಹೊಸ ಸೂರ್ಯನ ಉದಯವಾದಾಗ ಅದರ ಬೆಳಕಿನ ಕಿರಣಗಳು ಸಮಾಜ, ಊರು– ಕೇರಿ, ನಾಡು– ದೇಶ, ಭಾಷೆ, ಧರ್ಮ, ಮುಂತಾದವುಗಳೊದಿಗೆ ಸುತ್ತುವ ಅನಂತವಾದ ಚಕ್ರ–ವಿಷಚಕ್ರ ಎಲ್ಲವೂ ಆ ಬೆಳಕಿನ ಕಿರಣಗಳಲ್ಲಿ ನಿಧಾನವಾಗಿ ಗೋಚರವಾಗುತ್ತಾ ಹೋಗುತ್ತದೆ, ಎನ್ನುವ ಮಾತು ದಲಿತ ಜಗತ್ತಿನ ಕತ್ತಲೆಯನ್ನು

ಹೋಗಲಾಡಿಸಿದ ಕ್ರಾಂತಿ ಪುರುಷ ಬಾಬಾ ಸಾಹೇಬರ ದಲಿತ ಪ್ರಜ್ಞೆಯನ್ನು ಅನಾವರಣಗೊಳಿಸುತ್ತದೆ. ಅಕ್ಷರ ಕಲಿತು ಸಮಾಜವನ್ನು ಅರಿತು ಬೌದ್ಧಿಕವಾಗಿ ಬೆಳೆದು ದಲಿತರು ಬರೆಯಲು ಆರಂಭಿಸಿದ ಮೇಲೆ ಅವರಲ್ಲಿಯೇ ಹಲವಾರು ತೀಕ್ಷ್ಣವಾಗಿ, ಹರಿತವಾಗಿ, ಇನ್ನು ಕೆಲವರು ತಣ್ಣನೆಯ ರೀತಿಯಲ್ಲಿ ಬರೆಯುತ್ತ ರೋಗಗ್ರಸ್ತ ಸಮಾಜಕ್ಕೆ ಚಿಕಿತ್ಸೆ ನೀಡಲಾರಂಭಿಸಿದರು. ಈ ಕಾರಣದಿಂದಾಗಿ ದಲಿತ ಸಾಹಿತ್ಯವು ಸಂಗೀತ, ಕಲೆ, ಸಮಾಜ, ಶಿಕ್ಷಣ, ಧರ್ಮ, ರಾಜಕೀಯ, ಅರ್ಥಿಕತೆ ಮುಂತಾದ ರಂಗಗಳಲ್ಲಿ ಹೊಸ ತಿರುವಿನ ಬದಲಾವಣೆಯ ಅಲೆಯನ್ನು ಎಬ್ಬಿಸಿತು. ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಮ ನ ಜವರಯ್ಯ, ಅರವಿಂದ ಮಾಲಗತ್ತಿ ,ಜಂಬಣ್ಣ ಅಮರಚಿಂತ, ಎಲ್ ಹನುಮಂತಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಕೆ ಬಿ ಸಿದ್ದಯ್ಯ, ಸತ್ಯಾನಂದ ಪ್ರಾತೋಟ, ಮುಳ್ಳೂರು ನಾಗರಾಜು ಇವರೇ ಮೊದಲಾದ ದಲಿತ ಸಾಹಿತಿಗಳು ದಲಿತ ಸಾಹಿತ್ಯಕ್ಕೆ ಮುನ್ನುಡಿಯನ್ನು ಬರೆದು ಅಪಾರವಾದ ಜೀವಪರಕಾಳಜಿಯ ನೆಲೆಯ ಸಾಹಿತ್ಯವನ್ನು ಸೃಜಿಸಿದರು.

ಇಂತಹ ಜೀವಪರ ಕಾರುಣ್ಯದ ನೆಲೆಯಲ್ಲಿಯೇ ದಲಿತಸಾಹಿತ್ಯದ ಹರವನ್ನು ವಿಸ್ತರಿಸಿದ ಮೂಡ್ನಾಕೂಡು ಚಿನ್ನಸ್ವಾಮಿ ಅವರು ತಮ್ಮ ಆಕರ್ಷಕ ಬರವಣಿಗೆಯ ಮೂಲಕ ದಲಿತಸಾಹಿತಿಗಳಲ್ಲಿ ಮುಖ್ಯರೆನಿಸಿಕೊಳ್ಳುತ್ತಾರೆ. ತಾವು ಬಾಲ್ಯದ ದಿನಗಳಿಂದಲೂ ಕಂಡುಂಡ ಹಸಿ ಹಸಿ ಅಸ್ಪೃಶ್ಯತೆಯ ನೋವುಗಳನ್ನು ತಮ್ಮ ಬರವಣಿಗೆಯಲ್ಲಿ ತಳಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ದಲಿತಸಾಹಿತಿಗೆ ತನಗಾದ ಅನುಭವಗಳೇ ಆತನಲ್ಲಿ ಒಂದು ಸೃಜನಶೀಲ ವ್ಯಕ್ತಿತ್ವದ ಅನಾವರಣಕ್ಕೆ ಕಾರಣವಾಗುತ್ತದೆ. ಆ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ಬರುವ ಬದುಕಿನ ಅನುಭವ ದ್ರವ್ಯವು ಅತ್ಯಂತ ಮನಮುಟ್ಟುವಂತೆ ಅನಾವರಣಗೊಂಡಿದೆ. ಮಾನವೀಯ ಮೌಲ್ಯಗಳಿಗಾಗಿ ಅಪೇಕ್ಷಿಸುವ, ಅವುಗಳ ಸಾಕಾರಕ್ಕಾಗಿ ಹಪ ಹಪಿಸುವ ಲೇಖಕರ ದಲಿತಪರ ಕಾಳಜಿ ಅನುಕರಣೀಯವಾದುದಾಗಿದೆ.

ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗು ಈ ದೇಶದಿಂದ ತೊಲಗದಿದ್ದರೆ ಸರ್ವಸಮಾನವಾದ ಪ್ರಜಾಪ್ರಭುತ್ವದ ಆಶಯಗಳ ಹಿನ್ನೆಲೆಯ ಭಾರತದ ನಿರ್ಮಾಣ ಅಸಾಧ್ಯವೆಂದು ತಮ್ಮ ಬರೆವಣಿಗೆಯಲ್ಲಿ ತಿಳಿಸಿರುತ್ತಾರೆ. ಜೊತೆಗೆ ಇವರ ಬರವಣಿಗೆಯಲ್ಲಿ ಈ ನೆಲದ ಧರ್ಮವಾದ ಬೌದ್ಧ ಧರ್ಮದ ತತ್ವಗಳು ಮಡುಗಟ್ಟಿದೆ, ಈ ಧರ್ಮದ ಆಶಯವಾದ ಮಾನವರೆಲ್ಲ ಒಂದೇ ಎಂಬ ಸದಾಶಯದ ಮೇಲೆ ಆಸಕ್ತಿ ಹೊಂದಿರುವ ಚಿನ್ನಸ್ವಾಮಿ ಅವರು ಈ ಕುರಿತು ವಿಶಿಷ್ಟವಾಗಿ ಬರೆದಿರುತ್ತಾರೆ. ಈ ಹಿನ್ನೆಲೆಯಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಒಟ್ಟು ಬರಹದಲ್ಲಿ ದಲಿತಸಂವೇದನೆಯ ನೆಲೆಗಳು ಹೇಗೆ ಅನಾವರಣಗೊಂಡಿದೆ? ಎಂಬ ವಿಚಾರವನ್ನು ಗ್ರಹಿಸುವುದು ಮುಖ್ಯವಾಗುತ್ತದೆ ಅವರು ಬರೆದ ಕೃತಿಗಳಲ್ಲಿ ದಲಿತರ ಬದುಕಿನ ಸಮಸ್ಯೆಗಳಾದ ಜಾತೀಯತೆ, ಅಸ್ಪೃಶ್ಯತೆ, ಆರ್ಥಿಕತೆ, ಅಸಮಾನತೆ, ವಿವಿಧ ರಂಗಗಳಲ್ಲಿ

ಅವರಿಗಾಗುತ್ತಿರುವ ಶೋಷಣೆ ಇವೆ ಮೊದಲಾದ ಸಂಗತಿಗಳನ್ನು ಗುರುತಿಸಿ, ವರ್ತಮಾನದಲ್ಲಿ ಅವುಗಳ ಸ್ಥಿತಿ ಹೇಗಿದೆ? ಅವುಗಳಿಗೆ ಪರಿಹಾರವೇನು? ಎಂಬ ವಿಚಾರಗಳನ್ನು ಕುರಿತು ಈ ಅಧ್ಯಯನ ನಡೆಸಲಾಗುವುದು.

ಶತಮಾನಗಳಿಂದಲೂ ಜಾತಿ ಪದ್ಧತಿಯ ಕ್ರೂರ ಕರಾಳ ಮುಷ್ಟಿಗೆ ಸಿಲುಕಿ ಸಮಾಜದಲ್ಲಿ ಪ್ರೀತಿ ಶಾಂತಿ ಮಾನವೀಯತೆಯ ಮೌಲ್ಯಗಳು, ನಾಶವಾಗಿಹೋಗಿವೆ. ಜಾತಿ ಪದ್ಧತಿಯಿಂದ ನಮ್ಮ ದೇಶ ನಲುಗಿ ಹೋಗಿದೆ, ನಂತರದ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯದ ಕಾವ್ಯಗಳು ಒಂದು ದೊಡ್ಡ ಅಲೆಯನ್ನು ಎಬ್ಬಿಸಿದೆ. ಕನ್ನಡ ಸಾಹಿತ್ಯ ಸುಮಾರು 1900ರ ವರ್ಷಗಳ ಇತಿಹಾಸವನ್ನು ಹೊಂದಿದೆ. ಅದು ಇಂದಿನವರೆಗೆ ಅನೇಕ ಹೊಸ ತಿರುವುಗಳನ್ನು ಪಡೆದುಕೊಂಡು ಬದಲಾವಣೆಯ ಕಡೆ ಮುಖಮಾಡಿರುವುದನ್ನು ಕಾಣಬಹುದಾಗಿದೆ. ಪಂಪನಿಂದ ಪ್ರಾರಂಭಗೊಂಡು ಆಧುನಿಕ ಕಾಲದವರೆಗೂ ಸಾಹಿತ್ಯವು ನಾನಾ ಮುಖಗಳ ಮೂಲಕ ಬೆಳೆದು ನಿಂತಿರುವುದನ್ನು ಕಾಣಬಹುದಾಗಿದೆ. ಹೊಸಗನ್ನಡ ಸಾಹಿತ್ಯವನ್ನು ನವೋದಯ, ಪ್ರಗತಿಶೀಲ, ನವ್ಯ, ದಲಿತ, ಮತ್ತು ಬಂಡಾಯ ಎಂಬ 5 ಪ್ರಮುಖ ಕಾಲ ಘಟ್ಟಗಳಲ್ಲಿ ನೋಡಬಹುದಾಗಿದೆ. 20ನೇ ಶತಮಾನದ ಹೊಸಗನ್ನಡ ಸಾಹಿತ್ಯ ಹೆಚ್ಚು ವೈವಿಧ್ಯತೆಗಳನ್ನು ಒಳಗೊಂಡು ಶ್ರೀಮಂತವಾಗಿದೆ. ಇಲ್ಲಿ ಪ್ರತಿಯೊಂದು ಕಾಲಘಟ್ಟ ತನ್ನದೇ ಆದ ವಿಶಿಷ್ಟವಾದ ಮಹತ್ವವನ್ನು ಹೊಂದಿದೆ. ಕೆಳವರ್ಗದ ಜನತೆಯ ಬರಹವನ್ನು ದಲಿತ ಸಾಹಿತ್ಯವೆಂದು, ಎಲ್ಲಾ ಜಾತಿವರ್ಗಗಳ ಶೋಷಿತರ ಪರವಾಗಿ ರಚಿತವಾದ ಬರಹವನ್ನು ಬಂಡಾಯ ಸಾಹಿತ್ಯವೆಂದು ಕರೆಯಲಾಗಿದೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಲ್ಲಲ್ಲಿ ದಲಿತ ಪರವಾದ ಆಶಯಗಳು ಗೋಚರವಾಗುತ್ತದೆ. ಮಾನವ ಜಾತಿ ತಾನೊಂದೇ ವಲಂ ಎಂಬ ಪಂಪನ ಕಾವ್ಯದಿಂದ ಮೊದಲುಗೊಂಡು ವಚನಸಾಹಿತ್ಯ, ದಾಸಸಾಹಿತ್ಯ, ಸರ್ವಜ್ಞ ಮೊದಲಾದವರಲ್ಲಿ ಮುಂದುವರಿದು ನವೋದಯದಲ್ಲಿ ಚಾಚಿಕೊಂಡು ಮುಂದೆ 20ರ ದಶಕದಲ್ಲಿ ದಲಿತ ಪರವಾದ ಕಾಳಜಿ ವ್ಯಾಪಕವಾಗಿ ಬೆಳೆದು ಬಂದಿದೆ. ದಲಿತ ಸಾಹಿತ್ಯವನ್ನು ಅವಲೋಕಿಸುವ ಸಂದರ್ಭದಲ್ಲಿ 19ನೇ ಶತಮಾನದ ವಚನ ಚಳುವಳಿಯನ್ನು ಗಮನಿಸಬೇಕಾಗುತ್ತದೆ. ವಚನ ಸಾಹಿತ್ಯದಲ್ಲಿ ಸುಧಾರಣೆಗಳು ಹೆಚ್ಚಾಗಿ ನಡೆದಿವೆ, ದಲಿತ ಸಾಹಿತ್ಯಕ್ಕೆ ಹಿನ್ನೆಲೆಯೆಂದರೆ ವಚನ ಸಾಹಿತ್ಯವು ಪ್ರಮುಖವಾಗಿದೆ ಎಂದು ಹೇಳಬಹುದು. ಅನೇಕ ದಲಿತ ವಚನಕಾರರು ವಚನಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಇನ್ನು ಮುಂತಾದ ಕೆಳವರ್ಗಗದ ದಲಿತ ಕವಿಗಳು ತಮ್ಮ ಅನುಭವ ಮತ್ತು ನೋವುಗಳನ್ನು ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ನಂತರದಲ್ಲಿ ದಲಿತ ಸಾಹಿತ್ಯವು ಅತ್ಯಂತ ಸಹಜವಾದ ದಲಿತರಿಂದಲೇ ಆರಂಭಗೊಂಡು ಇದುವರೆಗೂ ಮೂಕರಾಗಿದ್ದ ದಲಿತ ಸಮುದಾಯದವರು ಎಚ್ಚೆತ್ತು ಸಾಹಸಿಗಳಾಗಿ ತಮ್ಮ ಸಮುದಾಯದ ಮೇಲೆ ನಡೆದ ಶೋಷಣೆ ದಬ್ಬಾಳಿಕೆಯ ವಿರುದ್ಧ ಹೋರಾಟದ ರೂಪದಲ್ಲಿ ಬರೆಯ ತೊಡಗಿದರು. ತಲೆತಲಾಂತರಗಳಿಂದ ತುಳಿಯಲ್ಪಟ್ಟಿರುವ ಈ ವರ್ಗಗದ ಜನತೆ ತಮ್ಮ ಈ ಸ್ಥಿತಿಗೆ ಕಾರಣವಾದವರ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಮೂಲಕ ಕಾವ್ಯವನ್ನು ರಚಿಸತೊಡಗಿದರು. ತಮ್ಮ ಚಿಂತನೆಗಳಿಗೆ ಆತ್ಮಭಿಮಾನ ಮೂಡಿಸಿಕೊಂಡು ನೋವನ್ನು ತೋಡಿಕೊಂಡು ನ್ಯಾಯಕ್ಕಾಗಿ ಹೋರಾಡುವ ಉತ್ಸಾಹ ಚಿಮ್ಮಿತು. ದಲಿತ ಸಾಹಿತ್ಯ ಇದರ ಫಲವಾಗಿ ತಮ್ಮ ದಿನನಿತ್ಯದ ಜೀವನದ ಆಗುಹೋಗುಗಳು ತಾವು ಅಸ್ಪೃಶ್ಯತೆಗೆ ಒಳಗಾಗಿ ಅನುಭವಿಸಿದ ನೋವು ವ್ಯಥೆ ಇವುಗಳಿಗೆ ಸಾಹಿತ್ಯದ ರಚನೆಯ ಮೂಲಕ ಲೇಖನಿಯಿಂದ ಉತ್ತರವನ್ನು ಕೊಡಲು ಪ್ರಾರಂಭಿಸಿದರು. ಸಮುದಾಯದಲ್ಲಿದ್ದ ಅಜ್ಞಾನ. ಅಂಧಕಾರ. ಸಂಪ್ರದಾಯಗಳು. ಅನಕ್ಷರತೆ. ಅಸಹಾಯಕತೆಗಳ ಬಗ್ಗೆ ಅರಿವು ಮೂಡಿಸುತ್ತಾ ಜೀತಪದ್ದತಿ, ವರ್ಗಪದ್ದತಿ ಮತ್ತು ಯಜಮಾನ ಸಂಸ್ಕೃತಿಯ ವಿರುದ್ಧ ಸಿಡಿದೆದ್ದರು.

ಇಂದು ಕನ್ನಡ ದಲಿತ ಸಾಹಿತ್ಯ ಅನೇಕ ರೂಪಗಳಲ್ಲಿ ಕಾಣಿಸಿಕೊಂಡಿದೆ. ಪ್ರಮುಖವಾಗಿ ಕಥೆ, ಕಾವ್ಯ, ಕಾದಂಬರಿ, ನಾಟಕ, ಲೇಖನ, ಕವನ, ಪ್ರಬಂಧ, ಆತ್ಮಕಥೆ, ಸಂಶೋಧನೆ, ವಿಚಾರ, ಮಂಡನೆ, ವಿಮರ್ಶೆ ಮತ್ತು ಪ್ರವಾಸ ಕಥನಗಳು ಉಲ್ಲೇಖವಾಗಿವೆ. ಇವುಗಳಲ್ಲಿ ಬಳಕೆಯಾದ ಭಾಷೆ, ಬಂಧ, ಶೈಲಿ, ಸಂಭಾಷಣೆ, ತಂತ್ರಗಳು, ಕನ್ನಡ ದಲಿತ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ನೆಲೆಯನ್ನು ಒದಗಿಸಿವೆ. ಇವುಗಳನ್ನು ಬಳಸಿಕೊಂಡು ಚಿನ್ನಸ್ವಾಮಿರವರ ಹುಟ್ಟಿನಿಂದ ಅನುಭವಿಸಿದ ನೋವು ಹತಾಶೆಗಳನ್ನು ತಾವು ಅನುಭವಿಸಿದ ನೋವುಗಳ ಸಂಕೋಲೆಯಿಂದ ಹೊರಬರಲು ತಾವೇ ಪಟ್ಟ ಶ್ರಮ ಮತ್ತು ಶೋಷಣೆಯನ್ನು ಕೊನೆಗಾಣಿಸಿವ ದೃಷ್ಟಿಯಿಂದ ಲೇಖನ, ಪ್ರಬಂಧ, ಕವನ, ನಾಟಕ, ಕಥೆ ಈ ರೀತಿಯಾದ ಮಾಧ್ಯಮಗಳನ್ನು ಬಳಸಿಕೊಂಡು ಬುದ್ದ, ಬಸವ, ಅಂಬೇಡ್ಕರ್, ಪುಲೆ ಮುಂತಾದವರ ದಾರಿಯಲ್ಲಿ ಸಾಗಿ ದಲಿತ ಸಾಹಿತ್ಯದ ವಿವಿಧ ಮಜಲುಗಳಲ್ಲಿ ಸಾಹಿತ್ಯವನ್ನು ರಚಿಸಿ ಓದುಗರ ಮುಂದೆ ಇಟ್ಟಿದ್ದಾರೆ. ಈ ಅಸ್ಪೃಶ್ಯತೆ ಶೋಷಣೆಗೆ ಮೂಢನಂಬಿಕೆಗಳ ವಿರುದ್ದ ಶಿಕ್ಷಿತ ಸಮುದಾಯ ಹೋರಾಟ ಮಾಡಿ ತಮ್ಮ ಹಕ್ಕುಗಳು ಕರ್ತವ್ಯಗಳನ್ನು ಪಡೆಯಬೇಕೆಂಬ ಹಂಬಲ ಅವರ ಸಾಹಿತ್ಯದ ಉದ್ದಕ್ಕೂ ಸಾಗುತ್ತಾ ಬಂದಿರುವುದನ್ನು ನಾವು ಕಾಣಬಹುದಾಗಿದೆ. ದಲಿತರು ಅನುಭವಿಸಿದ ದಲಿತಸಂವೇದನೆಯನ್ನು ಚಿತ್ರಿಸಿದ್ದಾರೆ. ಇವರ ಅರಿವು ಇಂದಿನ ಪೀಳಿಗೆಯವರೆಗೂ ತಲುಪಲು ಇವರು ಬರೆದಿರುವ ಗ್ರಾಮೀಣ ಭಾಷೆ ಪ್ರಮುಖ ಕಾರಣವಾಗಿದೆ.

ಅಧ್ಯಯನದ ಉದ್ದೇಶ:

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಲಿತ ಸಂವೇದನೆಯ ನೆಲೆಗಳು ಮತ್ತು ಸಾಹಿತ್ಯವನ್ನು ಕುರಿತಂತೆ ಹಲವಾರು ವಿದ್ವಾಂಸರು, ಲೇಖಕರು, ದಲಿತಸಾಹಿತಿಗಳು ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಈ ಅಧ್ಯಯನಗಳು ದಲಿತ ಗುರುತು, ದಲಿತ ವಚನಕಾರರು, ದಲಿತ ಕಾವ್ಯ, ದಲಿತ ನಾಟಕಗಳು, ಬದುಕು ಬರಹ, ಜೀವನಾನುಕ್ರಮ, ರಾಜಕೀಯತೆ, ಧಾರ್ಮಿಕತೆ, ಸಾಮಾಜಿಕತೆ, ಆರ್ಥಿಕತೆ ದಲಿತ ಕಥನ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ವ್ಯಕ್ತಿ ಅಧ್ಯಯನ ಕಾದಂಬರಿ, ನಾಟಕಗಳು, ವಿಮರ್ಶೆ, ಲೇಖನಗಳು, ಸಣ್ಣಕಥೆ ಮುಂತಾದವುಗಳ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಆದ್ಯತೆಯನ್ನು ನೀಡಿದ್ದಾರೆ.

ಆದರೆ ದಲಿತಸಂವೇದನೆಯನ್ನು ಕ್ರೋಢೀಕರಿಸಿಕೊಂಡು ವ್ಯಕ್ತಿಯನ್ನು ಕೇಂದ್ರವಾಗಿರಿಸಿದಂತಹ ಲೇಖನ ಸಣ್ಣಕಥೆ, ನಾಟಕ, ಕವನಗಳ ಸ್ವರೂಪ ಮತ್ತು ಅನನ್ಯತೆಯನ್ನು ಶೋಧಿಸುವ ಅಧ್ಯಯನಗಳು ಅಲ್ಪ ಪ್ರಮಾಣದಲ್ಲಿ ನಡೆದಿದೆ. ಹಾಗಾಗಿ ಈ ಅಧ್ಯಯನಕ್ಕೆ ತೆಗೆದುಕೊಂಡಿರುವಂತಹ 'ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ದಲಿತಸಂವೇದನೆಯ ನೆಲೆಗಳು' ಎಂಬ ಶಿರ್ಷಿಕೆ ಅಡಿಯಲ್ಲಿ ಅವರು ಅನುಭವಿಸಿದ ನೋವು ನಲಿವುಗಳು, ಜಾತಿನಿಂದನೆ, ಶೋಷಣೆ, ಅಸ್ಪೃಶ್ಯತೆ, ಮೇಲು-ಕೀಳು, ಮನೋಭಾವ, ಆರ್ಥಿಕತೆ, ಸಮಾನತೆ ಲೇಖನಗಳಲ್ಲಿ ಜಾತಿಯ ಬಗ್ಗೆ ತಿಳಿಸುವ ವೈಚಾರಿಕ ಪ್ರಜೆಗಳು ಬೌದ್ಧ ಧರ್ಮದದೊಂದಿಗೆ ಅಂದು ಮತ್ತು ಇಂದಿನ ಸಂಬಂಧಗಳು ದಲಿತ ಸಾಹಿತ್ಯದ ಅಂತರ್‌ಶಿಸ್ತು ಮತ್ತು ಪ್ರಾದೇಶಿಕತೆಯನ್ನು ಗುರುತಿಸುವ ಮೂಲಕ ಅವುಗಳ ಅವಿನಾಭವ ಸಂಬಂಧವನ್ನು ಶೋಧಿಸುವುದು ಈ ಮಹಾ ಪ್ರಬಂಧದ ಉದ್ದೇಶವಾಗಿದೆ.

ನಮ್ಮ ಕರುನಾಡಿನಲ್ಲಿ ದಲಿತಸಂವೇದನೆಯ ನೆಲೆಗಳಿಗೆ ತನ್ನದೇ ಬಹುದೊಡ್ಡದಾದ ಇತಿಹಾಸವಿದೆ. ದಲಿತ ಸಾಹಿತ್ಯವು ಇಂದು-ನಿನ್ನೆಯದಲ್ಲ ಇಂದು ಭಾರತಾದ್ಯಂತ ವ್ಯಾಪಿಸಿರುವುದನ್ನು ನಾವು ಗುರುತಿಸಬಹುದಾಗಿದೆ. ದಲಿತಸಂವೇದನೆಯು ದಲಿತರು ಮಾತ್ರ ಅನುಭವಿಸಿದ ನೋವು ನಲಿವುಗಳಿಂದ ರಚಿತವಾದ ಸಾಹಿತ್ಯವಲ್ಲ, ದಲಿತೇತರರು ಸಹ ಈ ಸಾಹಿತ್ಯ ಕೃಷಿಯಲ್ಲಿ ತೊಡಗಿ ಬೆಳೆ ತೆಗೆದಿರುವುದನ್ನು ನಾವು ಗಮನಿಸಬಹುದಾಗಿದೆ. ನಾನು ನಡೆಸಲಿರುವ ಈ ಅಧ್ಯಯನದಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ದಲಿತಸಂವೇದನೆಯ ನೆಲೆಗಳು ಎಂಬ ವಿಷಯದಲ್ಲಿ ಅವರ ಒಟ್ಟು ಸಾಹಿತ್ಯದಲ್ಲಿ ಅವರು ಯಾವ ರೀತಿಯಾಗಿ ದಲಿತ ಸಂವೇದನೆಯನ್ನು ನೋಡಿ ಅನುಭವಿಸಿದ್ದಾರೆಂಬುದನ್ನು ಗುರುತಿಸಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ:

ದಲಿತ ಸಾಹಿತ್ಯದ ವ್ಯಾಪ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಾ ಸಾಗುತ್ತಿದೆ, ಕಾರಣವೇನೆಂದರೆ ವಿದ್ಯಾವಂತರು, ಶಿಕ್ಷಿತರು, ತಾವು ಅನುಭವಿಸಿದ ನೋವುಗಳನ್ನು ತಮ್ಮ ಮಕ್ಕಳು ಅನುಭವಿಸಬಾರದು

ಸಮಾಜದಲ್ಲಿ ಉತ್ತಮವಾದ ಜೀವನವನ್ನು ಸಾಗಿಸಬೇಕೆಂಬ ದೃಷ್ಟಿಯಿಂದ ಮತ್ತು ಸಮುದಾಯದ ಮೇಲ್ಲಿರುವ ಪ್ರೀತಿಯಿಂದ ಮತ್ತು ಅಲ್ಲಿರುವ ತಾರತಮ್ಯವನ್ನು ತೊಡೆದು ಹಾಕಲು ಇಂದಿಗೂ ಪ್ರಯತ್ನಪಡುತ್ತಿದ್ದಾರೆ. ಕನ್ನಡ ದಲಿತ ಸಾಹಿತ್ಯದ ಮೊದಲ ಕಾಲಘಟ್ಟದಲ್ಲಿ ಬರುವವರು ಸಿದ್ದಲಿಂಗಯ್ಯ ಇವರ "ಹೊಲೆ ಮಾದಿಗರ ಹಾಡು" ಕವನ ಸಂಕಲನ ದಲಿತ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ಹಾಕಿ ಕೊಟ್ಟಿತು. ನಂತರ ದೇವನೂರು ಮಹಾದೇವರವರ ಅಮಾಸ, ಒಡಲಾಳ, ಕುಸುಮಬಾಲೆ ಕೃತಿಗಳು ಮುಂದುವರಿದಂತೆ ಮುಳ್ಳೂರು ನಾಗರಾಜರ 'ಮರಣ ಮಂಡಲ ಮಧ್ಯದೊಳಗೆ', ಕಾದಂಬರಿ ನೆಲದ ಜೋಗುಳ, ಮಹಾಕಾವ್ಯ, ಮಾಲಗತ್ತಿಯವರ ಕಾರ್ಯ ಕಾದಂಬರಿ ಮೂಕನಿಗೆ ಬಾಯಿ ಬಂದಾಗ, ಮೂರನೇ ಕಣ್ಣು ಕವನ ಸಂಕಲನಗಳು, ಕೆ.ಬಿ. ಸಿದ್ದಯ್ಯನವರ (ಬಕಾಲ), ಸತ್ಯಾನಂದ ಪ್ರಾತೋಟರ ಜಾಜಿಮಲ್ಲಿಗೆ, ಮ.ನ.ಜರವರ ಮಾಗಿ, ಕಾದಂಬರಿ ಮುಂತಾದವು ದಲಿತ ಜಾಗೃತಿಯನ್ನು ಹೊರಚಲ್ಲಿದವು. ಅಲ್ಲದೆ ಬಿ. ಚಿನ್ನಸ್ವಾಮಿ, ಮುನಿವೆಂಕಟಪ್ಪ, ಗೋವಿಂದಯ್ಯ, ಮೊಗಳ್ಳಿ ಗಣೇಶ್ ಕಥೆಗಳು, ಸೋಮಣ್ಣ ಹೊಂಗಳ್ಳಿಯರವರ ಕಥೆಗಳು ಬಿ. ಟಿ. ಜ್ಞಾನವಿ, ಜನಾರ್ದನ, ಬಿ. ಟಿ. ಲಲಿತ್ ನಾಯಕ್. ಚೆನ್ನಣ್ಣ ವಾಲಿಕಾರ್, ಗೀತಾ ನಾಗಭೂಷಣ, ರಂಜಾನ್ ದರ್ಗಾ ಮುಂತಾದವರು ದಲಿತ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರೆಲ್ಲದೆ ದಲಿತೇತರರು ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆದರೆ ದಲಿತ ಸಾಹಿತ್ಯ ದಲಿತರಿಂದಲೇ ರಚನೆಯಾಗಬೇಕೆಂಬ ಕಾನೂನು ಇಲ್ಲ. ಆದರೆ ದಲಿತೆತರರಿಗೆ ದಲಿತರ ನೋವುಗಳು, ಶೋಷಣೆ, ಹತಾಶೆ ಇವುಗಳನ್ನು ಅವರು ಅನುಭವಿಸಿರುವುದಿಲ್ಲಿ ಎಂಬುದಾಗಿ ತಿಳಿಯಬಹುದಾಗಿದೆ. ಇವರುಗಳಲ್ಲಿ ಪ್ರಮುಖವಾಗಿ ನನ್ನ ಅಧ್ಯಯನದ ದೃಷ್ಟಿಯಿಂದ ಮೂಡ್ನಾಕೂಡು ಚಿನ್ನಸ್ವಾಮಿಯವರ ಒಟ್ಟು ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿ ಆ ನಂತರದಲ್ಲಿ ಅವರ ಸಾಹಿತ್ಯ ವಿಮರ್ಶೆಯನ್ನು ಮಾಡುವಂತ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಅಧ್ಯಾಯನದ ವೈದಾನಿಕತೆ:

ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ದಲಿತಸಂವೇದನೆಯ ನೆಲೆಗಳು ಎಂಬ ಶೀರ್ಷಿಕೆಯನ್ನೊಳಗೊಂಡ ನನ್ನ ಅಧ್ಯಯನವೂ ಪ್ರಧಾನವಾಗಿ ಪ್ರಸ್ತಾವನೆ ಮತ್ತು ಸಮಾರೂಪವನ್ನು ಹೊರೆತುಪಡಿಸಿ 5 ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ 1 ಪ್ರಸ್ತಾವನೆಯಲ್ಲಿ ದಲಿತಸಂವೇದನೆಯ ನೆಲೆಗಳನ್ನು ಅರಿಯುವ ಸಂದರ್ಭದಲ್ಲಿ ಮೊದಲಿಗೆ ಮೂಡ್ನಾಕೂಡು ಚಿನ್ನಸ್ವಾಮಿ ಅವರ ದಲಿತಸಂವೇದನೆಯ ನೆಲೆಗಳನ್ನು ಕುರಿತಂತೆ ಪ್ರಸ್ತಾವನೆಯಲ್ಲಿ ಸ್ಪಷ್ಟ ಪಡಿಸಲಾಗಿದೆ. ದಲಿತ ಸಾಹಿತ್ಯ ಬೆಳೆದು ಬಂದ ದಾರಿ ಮತ್ತು ದಲಿತಸಂವೇದನೆಯ ನೆಲೆಗಳಿಗೆ ಸಂಬಂಧಿಸಿದ

ಸಂಗತಿಗಳನ್ನು ಇಲ್ಲಿ ಚರ್ಚಿಸಿಸಲಾಗುವುದು. ನಾನು ಕೈಗೊಂಡಿರುವ ಸಂಶೋಧನೆಯನ್ನು ಯಾವ ನೆಲೆಯಲ್ಲಿ ವಿವೇಚಿಸಿಕೊಳ್ಳುತ್ತೇನೆ ಎಂಬುದನ್ನು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ವಿವರಿಸಲಾಗಿದೆ. ಈ ವಿಷಯವನ್ನು ಕುರಿತಂತೆ ಇದುವರೆಗೆ ನಡೆದಿರುವಂತಹ ಸಾಹಿತ್ಯ ಸಮೀಕ್ಷೆಯನ್ನು ನಮೂದಿಸಲಾಗಿದೆ.

ಅಧ್ಯಾಯ 2 ದಲಿತ ಪದದ ಪರಿಕಲ್ಪನೆ ಚಿಂತನೆಗಳು ಎಂಬ ಶೀರ್ಷಿಕೆಯಲ್ಲಿ ದಲಿತ ಪದದ ಅರ್ಥ ವ್ಯಾಪ್ತಿ ತಿರುವುಗಳು ಮತ್ತು ಸಂವೇದನೆ ಕುರಿತು ಮುಂದುವರೆದಂತೆ ಅಂಬೇಡ್ಕರ್ ಚಿಂತನೆಗಳು ಗಾಂಧೀಜಿ ಅವರ ಚಿಂತನೆಗಳು, ಲೋಹಿಯಾ ಚಿಂತನೆಗಳು, ಫುಲೆ ಚಿಂತನೆಗಳು, ಕಾಲ್ ಮಾರ್ಕ್ಸ್ ಚಿಂತನೆಗಳು, ರಾಮಸ್ವಾಮಿ ಪೆರಿಯಾರು ಚಿಂತನೆಗಳನ್ನು ಕುರಿತು ಚರ್ಚಿಚಿಸಲಾಗಿದೆ.

ಅಧ್ಯಾಯ 03 ಮೂಡ್ನಾಕೂಡು ಚಿನ್ನಸ್ವಾಮಿ ಅವರ ಕವನ ಸಂಕಲನಗಳಲ್ಲಿ ದಲಿತಸಂವೇದನೆಯ ನೆಲೆಗಳು ಎಂಬುವುದರಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ ಬರೆಹ ಮತ್ತು ವ್ಯಕ್ತಿತ್ವದಲ್ಲಿ ದಲಿತಸಂವೇದನೆಯ ಸ್ವರೂಪ ಇವುಗಳನ್ನು ಕುರಿತು ಚರ್ಚಿಚಿಸಲಾಗಿದೆ. ಅದೇ ರೀತಿಯಾಗಿ ಇವರ ಕಲ್ಪನೆಯಲ್ಲಿ ದಲಿತಸಂವೇದನೆಯ ನೆಲೆಗಳು ಯಾವ ರೀತಿಯಾಗಿ ಬೇರು ಬಿಟ್ಟಿದೆ ಮತ್ತು ಬಳ್ಳಿಯ ರೂಪದಲ್ಲಿ ಹಬ್ಬಿದೆ, ಮರದ ರಂಬೆ ಕೊಂಬೆಗಳ ರೂಪದಲ್ಲಿ ಹರಡಿಕೊಂಡಿದೆ ಎಂಬುದನ್ನು ಇವರ ಬರೆಹದಲ್ಲಿ ನೋಡಲಾಗಿದೆ. ಜೊತೆಗೆ ಇವರ ಕವನಗಳಲ್ಲಿ ದಲಿತಸಂವೇದನೆಯ ನೆಲೆಗಳು ಎಂದು ವಿಭಾಗಿಸಿಕೊಳ್ಳಲಾಗಿದೆ. ಅದರಲ್ಲಿ ಪ್ರಭುತ್ವ, ಅಧಿಕಾರ, ಮತ್ತು ವ್ಯವಸ್ಥೆ ಎಂಬುದಾಗಿ ವಿಭಾಗಿಸಿಕೊಂಡು ದಲಿತರ ನೋವಿನ ಮತ್ತು ನಲುವಿನ ನೆಲೆಗಳು, ಜೀತ ಪದ್ಧತಿಯ ಕರಾಳ ಮುಖದ ಅಭಿವ್ಯಕ್ತಿ, ಅಸ್ಪೃಶ್ಯತೆ ಆಚರಣೆಯ ಮತ್ತು ನಿವಾರಣೆಯ ಮಾರ್ಗಗಳು, ಸಾಮಾಜಿಕ ಪ್ರತಿಭಟನೆ, ಆರ್ಥಿಕತೆ ಪ್ರತಿಭಟನೆ, ಧಾರ್ಮಿಕ ಪ್ರತಿಭಟನೆ, ಸಾಂಸ್ಕೃತಿಕ ಪ್ರತಿಭಟನೆ, ಮುಂತಾದವು ದಲಿತಸಂವೇದನೆಯಲ್ಲಿ ಹೇಗೆ ಕಟ್ಟಲ್ಪಟ್ಟಿವೆ ಅಥವಾ ಹೇಗೆ ಬಲೆ ಹೆಣೆದಿದೆ ಎಂಬುವುದನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ. ಒಟ್ಟಾರೆ ಅವರ ಕವನಗಳಲ್ಲಿ ದಲಿತಸಂವೇದನೆಯ ನೆಲೆಗಳು ಹೇಗೆ ಅನಾವರಣಗೊಂಡಿವೆ ಎಂಬುವುದನ್ನು ಗಮನಿಸಲಾಗಿದೆ.

ಅಧ್ಯಾಯ 04 ಚಿನ್ನಸ್ವಾಮಿ ಅವರ ನಾಟಕಗಳಲ್ಲಿ ದಲಿತಸಂವೇದನೆಯ ನೆಲೆಗಳು ಎಂದು ವಿಭಾಗಿಸಿಕೊಂಡು ಅದರ ಅಧ್ಯಯನಕ್ಕೆ ತಕ್ಕ ರೀತಿಯಲ್ಲಿ ಕೆಂಡದ ಮಳೆ, ಮೂರು ಬೀದಿ ನಾಟಕಗಳು, ಮತ್ತೆ ಮಳೆ ಬರುವ ಮುನ್ನ, ಚಂದಿರನ ಕಣ್ಣು, ಹಿಂಗಲಾರದ ಹುಣ್ಣು, ಬಹುರೂಪಿ ಪದ್ಯಗಳನ್ನು ಆಧರಿಸಿದ ನಾಟಕಗಳಾದ ಬಹಿಷ್ಕಾರ ಅಂಗಭಂಗ, ಅಪಘಾತ ಮತ್ತು ಕೆಂಡಮಂಡಲ ಇವುಗಳು ಸಹ ದಲಿತಸಂವೇದನೆಯ ನೆಲೆಗಳನ್ನು ಯಾವ ರೀತಿಯಾಗಿ ಕಟ್ಟಿಕೊಡುತ್ತವೆ ಎಂಬುದನ್ನು ಮತ್ತು ಧರ್ಮಗಳಲ್ಲಿ

ನಾಟಕದ ಪಾತ್ರಗಳು ಪ್ರದೇಶದಿಂದ ಪ್ರದೇಶಕ್ಕೆ ಸಂಸ್ಕೃತಿಯಿಂದ ಸಂಸ್ಕೃತಿಗೆ ಸಾಹಿತ್ಯದಿಂದ ಸಾಹಿತ್ಯಕ್ಕೆ ಹೇಗೆ ಭಿನ್ನತೆಗಳನ್ನು ಹೊಂದಿದೆ ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ 05 ರಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಣ್ಣ ಕಥೆಗಳಲ್ಲಿ ದಲಿತಸಂವೇದನೆಯ ನೆಲೆಗಳು ಭಾರತ ದೇಶವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ಇವರ ಕಥೆಗಳಲ್ಲಿ ಬರುವ ಜಾತೀಯ ಸಮಸ್ಯೆಗಳು, ಅಂತರ್ ಜಾತಿ ವಿವಾಹ, ಮೂಗನಿಗೆ ಪ್ರಾಣಿಯ ಮೇಲಿನ ಪ್ರೀತಿ, ಮೂಢನಂಬಿಕೆಗಳು ಜೀತಪದ್ಧತಿ, ಆರಕ್ಷಕ ಠಾಣೆಯಲ್ಲಿ ನಡೆಯುವ ಕಾನೂನಿನ ಪರಿಪಾಠ ಇವುಗಳನ್ನೊಳಗೊಂಡ ಮೋಹದ ದೀಪ, ಮೂಗನಪಾಡು, ಗುಡ್ಡದ ಮೆರೆಯುಲುರಿದ ಮೋಹದ ದೀಪ, ಅವಸ್ಥಾಂತರ, ನಾನು ಅವ್ವ ಮತ್ತು ಕಾಗೆ, ಅಜ್ಜನಿಗೆ ಬಿದ್ದ ಮೋಡದ ಕನಸು, ಗಣಪನ ಸ್ವಗತ, ಹೊಸ ಮೇಷ್ಟರ ವೃತ್ತಿ ಪ್ರಸಂಗ, ದ್ಯಾವರ ಕೇಳುವವರು, ಪಾಪ ಪ್ರಜ್ಞೆ, ನಿಯೋಗ, ಹೀಗೋಂದು ಪ್ರಕರಣ, ಅಣ್ಣಾಚಿ, ನೀಲಿ ಬಾವುಟಗಳು ಇವುಗಳ ನಡುವಿನ ದಲಿತಸಂವೇದನೆಯು ಒಂದಕ್ಕೊಂದು ಹೇಗೆ ಹೋಲಿಕೆಯಾಗಿದೆ ಮತ್ತು ಶೋಷಣೆ ದಬ್ಬಾಳಿಕೆ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ 6 ರಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಲೇಖನ ಮತ್ತು ಪ್ರಬಂಧಗಳಲ್ಲಿ ದಲಿತಸಂವೇದನೆಯ ನೆಲೆಗಳು ಎಂಬ ಇವರ ಸಾಹಿತ್ಯದಲ್ಲಿ ಬೌದ್ಧ ಧರ್ಮದ ಪರಿಕಲ್ಪನೆ ಬುದ್ಧ ಬಸವ ಅಂಬೇಡ್ಕರ್ ಫುಲೆ ಇವರುಗಳ ಹಾದಿಯಲ್ಲಿ ಸಾಗುತ್ತಿರುವ ಲೇಖಕರು ಬೌದ್ಧ ಧರ್ಮದ ಪರಿಕಲ್ಪನೆ ಮಾನವೀಯತೆಯ ಮೌಲ್ಯಗಳ ಅನಾವರಣ, ಮಾತು ಮಂಥನೆ ಭಾಗ 1.2, ಒಂದು ಕೊಡ ಹಾಲಿನ ಸಮರ, ಅಪರಿಮಿತರ ಕತ್ತಲೆ ಭಾಗ 1.2, ಚಿನ್ನುಡಿ, ಹೆಚ್ಚುವರಿ ಲೇಖನಗಳು ಈ ಅಧ್ಯಯನದಲ್ಲಿ ಗಮನಿಸಲಾಗಿದೆ. ಮೂಢನಂಬಿಕೆ ಆಚರಣೆ ಧಾರ್ಮಿಕತೆ, ಧರ್ಮಗಳ ಮೇಲಿನ ನಂಬಿಕೆ ಮತ್ತು ದಲಿತರ ಜೀವನದಲ್ಲಿ ಸಮಸ್ಯೆಗಳಾದ ಜಾತಿ ನಿಂದನೆ, ಶೋಷಣೆ, ಉಳ್ಳವರ ದಬ್ಬಾಳಿಕೆಯನ್ನು ತಮ್ಮ ವಲ್ಲದ ಮನಸ್ಸಿನಿಂದ ಮೌನವಾಗಿಯೇ ಪ್ರತಿಪಟಿಸುವುದನ್ನು ಇವರ ಲೇಖನ ಪ್ರಬಂಧಗಳಲ್ಲಿ ಕಾಣಬಹುದಾಗಿದೆ. ಅದೇ ರೀತಿಯಾಗಿ ಇವರು ಯಾವ ರೀತಿಯಾಗಿ ಮೇಲ್ವರ್ಗಗದವರ ದರ್ಪಕ್ಕೆ ಒಳಗಾಗಿದ್ದಾರೆ ಎಂಬುದನ್ನು ತಮ್ಮ ಹರಿತವಾದ ಲೇಖನಿಯ ಮೂಲಕ ಉತ್ತರಿಸಿದ್ದಾರೆ. ಇವರ ಈ ಲೇಖನ ಮತ್ತು ಪ್ರಬಂಧಗಳನ್ನು ದಲಿತಸಂವೇದನೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ 07 ರಲ್ಲಿ ದಲಿತಸಂವೇದನೆಯ ನೆಲೆಗಳು ಮೂಡ್ನಾಕೂಡು ಚಿನ್ನಸ್ವಾಮಿ ಅವರ ದೃಷ್ಟಿಯಲ್ಲಿ ಹೇಗೆ ಅನಾವರಣಗೊಂಡಿದೆ? ಎಂಬುವುದನ್ನು ತಿಳಿಸಲಾಗುವುದು. ಸಮಾರೊಪದಲ್ಲಿ ಫಲಿತಗಳನ್ನು

ನೀಡಲಾಗಿದೆ. ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ವಿವರಿಸಲಾಗಿದೆ. ಅಧ್ಯಾಯಗಳ ಕೊನೆಗೆ ಆಕರ ಗ್ರಂಥಗಳ ಮತ್ತು ಪರಾಮರ್ಶನ ಗ್ರಂಥಗಳ ಪಟ್ಟಿ ನೀಡಲಾಗಿದೆ.

ಅಧ್ಯಯನದ ಮಹತ್ವ:

ದಲಿತ ಸಾಹಿತ್ಯವು ನೊಂದ ಮನಸ್ಸಿನ ಮನೋ ವೇದನೆಳನ್ನೊಗೊಂಡ ಸಾಹಿತ್ಯವಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ತುಳಿತಕ್ಕೆ ಒಳಗಾಗಿ ಸಮುದಾಯದ ನೆನಪುಗಳನ್ನು ಮರೀಚಿಕೆಯ ವೇಗದಲ್ಲಿ ಮತ್ತೆ ಮರುಜೀವ ತುಂಬಿದಂತಹ ಸಾಹಿತ್ಯ ಇದಾಗಿದೆ. ಸಮಾಜದಲ್ಲಿನ ಅಸ್ಪೃಶ್ಯತೆ, ವರ್ಗ ತಾರತಮ್ಯ, ಅಸಮಾನತೆ, ಶೋಷಣೆ, ದಬ್ಬಾಳಿಕೆ ಇವುಗಳ ವಿರುದ್ಧ ಸಾಹಿತ್ಯಿಕವಾಗಿ ದಲಿತರ ಸಂವೇದನೆಯನ್ನು ನಿರ್ವಹಿಸಲು ಹಲವಾರು ಚಳವಳಿಗಳು ರೂಪುಗೊಂಡವು. ಅವುಗಳಲ್ಲಿ ಪ್ರಮುಖವಾದಂತಹ ಚಳವಳಿ ದಲಿತ ಚಳವಳಿ ಎನ್ನಬಹುದಾಗಿದೆ. ನಮ್ಮ ಭಾರತೀಯರಿಗೆ ಅಂಬೇಡ್ಕರ್ ಜಾತಿ ಗೊತ್ತು. ಆದರೆ ಅಂಬೇಡ್ಕರ್ "ಜ್ಞಾನ" ಗೊತ್ತಿಲ್ಲ. ದಲಿತ ಸಾಹಿತ್ಯಕ್ಕೆ ತಲಸ್ಪರ್ಶಿ ಅಡಿಪಾಯ ಹಾಕಿಕೊಟ್ಟು ದಲಿತರ ಬಾಳಿನ ಆಶಾಕಿರಣವಾಗಿದ್ದಾರೆ. ಗಾಂಧೀಜಿಯವರು ಹಿಂದೂ ಧರ್ಮದ ಒಳಗೆ ನಿಂತು ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದಲಾವಣೆಯನ್ನು ಬಯಸಿದ್ದರು. ಆದರೆ ಅಂಬೇಡ್ಕರ್ ರವರು ಹಿಂದೂ ಧರ್ಮದ ಹೊರಗೆ ನಿಂತು ಬದಲಾವಣೆಯನ್ನು ಮಾಡಲು ಪ್ರಯತ್ನಿಸಿದರು. ಇವರಿಬ್ಬರು ಒಂದೇ ಚಿಂತನೆಯ ಹಾದಿಯಲ್ಲಿ ಪ್ರಯತ್ನಿಸಿದರು. ತದನಂತರ ಜ್ಯೋತಿಬಾಫುಲೆ ಅವರು ಜಡ ಸಂಸ್ಕೃತಿ, ಮೂಢನಂಬಿಕೆ, ಅಸ್ಪೃಶ್ಯರಿಗೆ ಶಿಕ್ಷಣ, ವಿಧವೆಯರ ಪಾಲನೆ ಮುಂತಾದ ಹೊಸ ಹೊಸ ಚಿಂತನೆಗಳಿಗೆ ನೆಲೆಯನ್ನು ಒದಗಿಸಿಕೊಟ್ಟರು.

ಮತ್ತೊಬ್ಬ ಚಿಂತಕರಾದ ಲೋಹಿಯವರು ಅಂಬೇಡ್ಕರ್ ಅವರೊಳಗಿನ ಸಮಾಜದ ನೆಲೆಯನ್ನು ಗುರುತಿಸಿ, ಅವರ ಹೋರಾಟದ ನೆಲೆಗಳಲ್ಲಿ ಸಾಗಿ ದಲಿತರು ಹಿಂದುಳಿದಿರುವವರ ಜೀವನದ ಕಷ್ಟ-ಸುಖದ ವಿರುದ್ಧ ಮೇಲು-ಕೀಳು ಭಾವನೆಗಳನ್ನು ಸದೆಬಡಿಯಲು ಕಾರಣರಾದರು. ಇವರಂತೆ ಮಾರ್ಕ್ಸ್‌ರವರು ಸಹ ತಮ್ಮ ನಾಸ್ತಿಕವಾದದ ಮೂಲಕ ದೇವರನ್ನು ತಿರಸ್ಕರಿಸಿ ದೇವರನ್ನು ಮಾನವರು ಸೃಷ್ಟಿಸಿರುವುದು ಎಂದು ವಾದಿಸಿ ಕಾರ್ಮಿಕರ ಬಗ್ಗೆ ಹೆಚ್ಚು ಒಲವನ್ನು ಹೊಂದಿದ ವ್ಯಕ್ತಿ. ಬಂಡವಾಳ-ಶಾಹಿ ಶ್ರಮ, ಇತಿಹಾಸ. ಕಾರ್ಮಿಕ ವರ್ಗ, ಸಂಪತ್ತಿನ ಉತ್ಪಾದನೆ ಪ್ರಾಕೃತಿಕ ಸಂಪನ್ಮೂಲಗಳು ಇನ್ನು ಮುಂತಾದವುಗಳ ಬಗ್ಗೆ ಚಿಂತಿಸಿ ಅವರ ಹಕ್ಕುಗಳು ಅವರಿಗೆ ಸಿಗುವಲ್ಲಿ ಪ್ರಮುಖ ಪಾತ್ರ ವಹಿಸಿ ದಲಿತರ ಏಳಿಗೆಗೆ ಶ್ರಮಿಸಿದಂತ ಒಬ್ಬ ಮಹಾ ಚಿಂತಕ. ಮುಂದುವರೆದು ನೋಡುವುದಾದರೆ ಪೆರಿಯಾರ್ ಸಹ ಈ ಒಂದು ಹೋರಾಟದ ಹಾದಿಯಲ್ಲಿ ಸಾಗಿ ಬಂದಿರುವ ಪ್ರಮುಖ ವ್ಯಕ್ತಿಯಾಗಿದ್ದಾರೆ, ಇವರು ಮೂಢನಂಬಿಕೆಗಳ ಪರಮ ವಿರೋಧಿಯಾಗಿದ್ದರು. ದ್ರಾವಿಡ ಕಳಗಂ ಪಕ್ಷದ ಸಂಸ್ಥಾಪಕರು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಗೌರವ ಮತ್ತು ಶೋಷಣೆಯಿಂದ

ಮುಕ್ತರಾಗಬೇಕೆಂದು ಹಂಬಲಿಸಿದವರು ದಲಿತರ ಏಳಿಗೆಗೆ ಶ್ರಮಿಸಿದವರಲ್ಲಿ ಪ್ರಮುಖರು. ಇವರ ಜೊತೆಯಲ್ಲಿ ಶಾಹು ಮಹಾರಾಜರು, ಕನಕದಾಸರು, ಬಸವಣ್ಣ ಇನ್ನು ಮುಂತಾದವರು ದಲಿತರ ಸಂವೇದನೆಯನ್ನು ನೀಗಿಸಲು ಶ್ರಮಿಸಿದ ಮೇಧಾವಿಗಳು ಎಂದು ಹೇಳಬಹುದಾಗಿದೆ. ಕವನ ಒಂದು ಸಾಮಾಜಿಕ ಸಂಕಟ, ತನಗೂ ಸಮಾಜಕ್ಕೂ ಉಂಟಾದ ಸಂಕಟವನ್ನು ಹೇಳಲು ಕವಿಗೆ ಅನೇಕ ಮಾಧ್ಯಮಗಳಿವೆಯಷ್ಟೇ. ಅದರಲ್ಲಿ ಭಾಷೆಯೂ ಒಂದು ಮಾಧ್ಯಮ. ಈ ಭಾಷೆ ಕಾವ್ಯ ಭಾಷೆಯ ಅಂತಃಶಕ್ತಿ ಪಡೆದಾಗ ಮಾತ್ರ ಕವನ ಅಥವಾ ಕವಿತೆಯಾಗುತ್ತದೆ.

ಕಾವ್ಯವು ಜನರ ಆಡುಮಾತು ಅದರಲ್ಲೂ ಆಡು ಭಾಷೆಯಲ್ಲಿರುವ ನುಡಿಗಟ್ಟುಗಳ ಬಳಕೆಯಿಂದ ರಚನೆಯಾದರೆ ಅದು ಪರಿಣಾಮಕಾರಿಯಾದ ಉತ್ತಮಮಟ್ಟದ ಕಾವ್ಯವಾಗುತ್ತದೆ. ಪ್ರತಿಮೆಗಳು, ಸಂಕೇತಗಳು, ರೂಪಕ ಇವೆಲ್ಲವೂ ಆಡು ಭಾಷೆಯಲ್ಲಿವೆ. ಇಂತಹ ಆಡುಭಾಷೆಯಲ್ಲಿನ ಕಾವ್ಯಾತ್ಮಕವಾದ ನುಡಿಗಟ್ಟುಗಳನ್ನು ಕವಿಗಳು ಕಾವ್ಯದಲ್ಲಿ ಬಳಸಿಕೊಂಡಾಗ ನಿಜಕ್ಕೂ ಉನ್ನತ ಮಟ್ಟದ ಕಲೆಗಾರಿಕೆಯನ್ನು ಸಾಧಿಸಬಹುದು. ಕವಿಗೆ ಈ ಬಗ್ಗೆ ಅರಿವಿದೆ ಇವರ ಕವನಗಳಲ್ಲಿ ಈ ರೀತಿಯ ಭಾಷಾ ಬಳಕೆಯನ್ನು ಮಾಡುವ ಪ್ರಯತ್ನವನ್ನು ಅಲ್ಲಲ್ಲಿ ಮಾಡಿದ್ದಾರೆ. ಇವರ ಬಹುತೇಕ ಕವನಗಳು ಶಿಷ್ಟಭಾಷೆಯಿಂದಲೇ ರಚನೆಗೊಂಡಿದ್ದು. ಸಾಮಾನ್ಯ ಎಲ್ಲಾ ಓದುಗರಿಗೂ ಅರ್ಥವಾಗುವಂತೆ ಸುಲಭವಾಗಿ ಓದುವಂತಿದೆ. ದಲಿತ ಸಾಹಿತ್ಯದಲ್ಲಿನ ಕವಿತೆಗಳು ಗೇಯತೆ ಅಂಶದಿಂದ ಕೂಡಿದ್ದು, ಅದು ಜಾನಪದದ ಸೊಗಡನ್ನು ಪ್ರಾದೇಶಿಕ ಭಾಷೆಯ ಪ್ರಕಾರಗಳನ್ನು ಒಳಗೊಂಡಿದೆ. ಸಾವಿರಾರು ವರ್ಷಗಳ ಸಾಹಿತ್ಯ ವಿವಿಧ ಘಟ್ಟಗಳಲ್ಲಿ ಬೆಳೆದು ಬಂದಿದೆ ಜೈನ, ಶೈವ, ವೈದಿಕ ಸಾಹಿತ್ಯ ಎಂಬುದಾಗಿ ದಲಿತ ವರ್ಗಕ್ಕೆ ದಾಸ್ಯವನ್ನು ಬೋಧಿಸಿ, ಅವರಿಗೆ ಜನ್ಮಾಂತರದ ಪಾಪಗಳೆಂದು ಮತ್ತು ಅವರಿಗೆ ಮೋಕ್ಷದ ಮಾರ್ಗಗಳನ್ನು ತೋರಿಸಲು ಹೊರಟರು. ಅವರ ಈ ವಿಮೋಚನೆಯನ್ನು ಆ ಸಾಹಿತ್ಯ ಮಾಡಲಿಲ್ಲ ನಡುಗನ್ನಡ ಸಾಹಿತ್ಯ, ಕೆಳವರ್ಗದ ಧ್ವನಿಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಿತು. ಕನ್ನಡ ದಲಿತ ಸಾಹಿತ್ಯವು 12ನೇ ಶತಮಾನದ ವಚನ ಸಾಹಿತ್ಯದಿಂದ ಗುರುತಿಸಲಾಯಿತು. ನಂತರ ಮುಂದುವರೆದಂತೆ ಇವರ ಕವನಗಳಲ್ಲಿ ತಾವು ಅನುಭವಿಸಿದ ನೋವು ಹತಾಶೆ, ಜೀತಪದ್ಧತಿ, ದಬ್ಬಾಳಿಕೆ ಇವುಗಳ ಕರಾಳ ಮುಖದ ಚಿತ್ರಣವಿದೆ. ವಾಸ್ತವಿಕ ಪ್ರಪಂಚದ ಅನುಭವಗಳನ್ನು ಇವರು ತಮ್ಮ ಕಾವ್ಯದ ಮೂಲಕ ಹೊರಹಾಕಿದ್ದಾರೆ. ಇದನ್ನು ಇತರರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆದರಿಂದ ಕಾರ್ಯಗಳು ಗದ್ಯ ಪ್ರಕಾರಕ್ಕಿಂತ ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆ.

ಡಾ. ಅರವಿಂದ ಮಾಲಗತ್ತಿ ಹೇಳುವಂತೆ ಕನ್ನಡ ಕಾವ್ಯದಲ್ಲಿ ದಲಿತ ಧ್ವನಿಗಳನ್ನು ಹೆಕ್ಕಿ ತೆಗೆಯಬೇಕಾದರೆ ದೀರ್ಘ ಕಾಲಾವಧಿಯ ಬೃಹತ್ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಕವಿ ಜನರ

ನೋವು ನಲಿವು ಏನೆಂಬುದನ್ನು ತಾವೇ ಸ್ವತಃ ಅನುಭವಿಸಿದ್ದಾರೆ. ತಾನು ಅನುಭವಿಸಿದ ಆ ನೋವಿಗೆ ಒಂದು ಕಾವ್ಯರೂಪವನ್ನು ಕೊಟ್ಟಿದ್ದಾರೆ. ಇವರ ಬಹುತೇಕ ಕವನಗಳಲ್ಲಿ ಕಾಣಬಹುದಾಗಿದೆ. "ಖಡ್ಗವಾಗಲಿ ಕಾವ್ಯ" ಎಂಬ ಕಹಳೆಯ ಮೊಳಗನ್ನು ಕೇಳುತ್ತಲೇ ತಮ್ಮ ಕಾವ್ಯ ಹೀಗಾಗುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಆರಂಭದಲ್ಲೇ ಮನಗಂಡ ಚಿನ್ನಸ್ವಾಮಿಯವರು ಕಾವ್ಯವನ್ನು "ಕುಡುಗೋಲು ಮಾಡಿಕೊಂಡು ನೋವಿನ ಕುಯ್ಲು ಮಾಡಿದ್ದೇನೆ" ಎಂದಿರುವುದರ ಜೊತೆಗೆ ಸಮಕಾಲೀನ ವಸ್ತು ವಿಷಯಗಳನ್ನು ಕುರಿತು ಮೆಲು ದನಿಯಲ್ಲಿ ಮಾತನಾಡುವ ಮಾರ್ಗವೇ ಸನಿಹವೆಂದು ಬಗೆದು ಮುಂದುವರೆದಿದ್ದಾರೆ. ಹಾಗೆಯೇ ನೋವು ಅವರ ಕವಿತೆಯ ಸ್ಥಾಯಿ ಭಾವವಾಗಿದೆ. ಅದನ್ನು ಪ್ರಕಟಿಸಲು ಅಳವಡಿಸಿಕೊಂಡು ಸುಸಂಸ್ಕೃತ ಅಭಿವ್ಯಕ್ತ ಕ್ರಮ ಇವರ ಕವನಗಳ ವೈಶಿಷ್ಟ್ಯವೆಂದು ಹೇಳಬಹುದಾಗಿದೆ. ಇವರ ಈ ಕವನಗಳ ಜೊತೆಗೆ ಸ್ತ್ರಿ ಸಂವೇದನೆ ಕವನಗಳು, ಪ್ರಣಯ ಕವನಗಳು ಇತ್ಯಾದಿ ಕವನಗಳನ್ನು ಇವರ ಕವನ ಸಂಕಲನದಲ್ಲಿ ಕಾಣಬಹುದಾಗಿದೆ.

ದಲಿತ ಬಂಡಾಯ ಸಾಹಿತ್ಯ ಪ್ರಕಾರದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳೆಂದರೆ ಕಥೆ ಮತ್ತು ಕಾವ್ಯ ಪ್ರಕಾರಗಳು. ಆದರೆ ನಾಟಕ ಪ್ರಕಾರ ಈ ಸಾಹಿತ್ಯದ ಸಂದರ್ಭದಲ್ಲಿ ತುಂಬಾ ಕಡಿಮೆಯಾಗಿದ್ದರು ತುಂಬಾ ಅರ್ಥಪೂರ್ಣವಾಗಿ ಬಳಕೆಯಾಗಿದೆ ಸಿದ್ದಲಿಂಗಯ್ಯನವರ ನಾಟಕಗಳನ್ನು ಬಿಟ್ಟರೆ ಈ ನಾಟಕ ಪ್ರಕಾರದಲ್ಲಿ ದಲಿತರ ಮೇಲಿನ ಕ್ರೌರ್ಯ, ಅತ್ಯಾಚಾರದಂತಹ ಪ್ರಕರಣಗಳನ್ನು ನಾಟಕಗಳನ್ನಾಗಿ ಬೀದಿಬೀದಿಗಳಲ್ಲಿ ಪ್ರದರ್ಶಿಸಿ ಜನರನ್ನು ಸಂಘಟಿಸಿದ್ದು ಒಂದು ದೊಡ್ಡ ಸಾಧನೆಯಾಗಿದೆ. ಈ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದವರು ಮತ್ತು ಭಿನ್ನ ರೀತಿ ಆಲೋಚನೆ ವಿವಿಧ ಹಿನ್ನೆಲೆಗಳಲ್ಲಿ ನಿಂತು ನೋಡಿದ ಬರಹಗಾರ ಮೂಡ್ನಾಕೂಡು ಚಿನ್ನಸ್ವಾಮಿ ಜಾಗತಿಕ ಸಾಹಿತ್ಯ ಪರಂಪರೆಯಲ್ಲಿ ನಾಟಕವು ಒಂದು ಮಹತ್ವದ ಕಲೆಯಾಗಿದ್ದು, 'ಅಭಿನಯ ಮತ್ತು ಸಾಹಿತ್ಯವೆಂಬ' ಎರಡು ಆಯಾಮಗಳನ್ನು ಹೊಂದಿರುವ ಒಂದು ವಿಶಿಷ್ಟ ಕಲೆಯಾಗಿದೆ. ಇದನ್ನು ಕುರಿತು ಕಾಳಿದಾಸನ "ಕಾವ್ಯೇಷು ನಾಟಕಂ ರಮ್ಯಂ" ಎಂದು ಹೇಳಿದ್ದಾನೆ ಮೂಡ್ನಾಕೂಡು ಚಿನ್ನಸ್ವಾಮಿ ಅವರ ನಾಟಕಗಳಲ್ಲಿ ದಲಿತ ಸಂವೇದನೆಯ ರೂಪವು ವ್ಯಕ್ತವಾಗಿದೆ.

ಇವರ ನಾಟಕಗಳಲ್ಲಿ ದಲಿತ ಲೋಕದ ಅನುಭವ ಹಾಗೂ ಅವಮಾನ ಕ್ರೌರ್ಯಗಳು ಎದುರಾದರು ಪ್ರತಿಭಟನೆಯನ್ನು ಪತ್ರಗಳ ಮೂಲಕ ನಡೆಸಿದ್ದಾರೆ. ಯು. ಆರ್. ಅನಂತಮೂರ್ತಿಯವರು ಒಂದು ಕಡೆ ಹೇಳುವಂತೆ ಅಸ್ಪೃಶ್ಯನೊಬ್ಬ ತನ್ನ ಬಾಲ್ಯದಲ್ಲಿ ಕೇವಲ ಮಾತೃಭಾಷೆ ಆವರಣದಲ್ಲಿ ಬೆಳೆದು ತನ್ನ ಭಾವನೆಗಳನ್ನು ವಿಶ್ಲೇಷಣಾತ್ಮಕವಾಗಿ ತೊಡಿಕೊಳ್ಳಲಾಗದ ಅನಾವರಣದವನಾಗಿದ್ದಲ್ಲಿ ಒಂದು ವಿಶಿಷ್ಟ ರೀತಿಯ ಸಂವೇದನೆ ಅವನದಾಗಿರುತ್ತದೆ. ಅಂದರೆ ಅದುಮಿಟ್ಟುಕೊಂಡ ನೋವು ರೂಪಕವಾಗಿ ಮಾತ್ರ ಹೊರಹೊಮ್ಮಬಹುದಾದ ಆತಂಕ ಪೂರ್ಣ ಮನಸ್ಥಿತಿ ಅವನದಾಗಿರುತ್ತದೆ. ಹೀಗೆ ಅವಮಾನಿತ ಅಸ್ಪೃಶ್ಯ

ಕೇವಲ ಒಂದು ಭಾಷೆಯಲ್ಲಿ ಬೆಳೆದವ ವಿಶ್ಲೇಷಣಾತ್ಮಕವಾಗಿ ತನ್ನ ಬಗ್ಗೆಯೇ ಮಾತನಾಡಿಕೊಳ್ಳಲಾರದ ಮನಸ್ಸಿನವ ಈ ಎಲ್ಲಾ ಕಾರಣಗಳಿಂದಾಗಿ ಹುಟ್ಟುವ ಪ್ರತಿಭೆ ಅಸಾಮಾನ್ಯ ರೂಪಕ ಶಕ್ತಿ ಒಂದನ್ನು ಪಡೆದುಕೊಂಡಿರಲೇ ಬೇಕಾಗಿರುತ್ತದೆ. ರೂಪಕ ಅಲಂಕಾರವಾಗದೆ ಜೀವನದ ಮಾತಾಡಬೇಕಾದ ಅಗತ್ಯ. ಬ್ಲೇಕ್. ಬೇಂದ್ರೆ ಅಂತವರಿಗೆ ನಮ್ಮ ವೈಯುಕ್ತಿಕ ಪ್ರತಿಭೆಯಿಂದ ಬಂದದ್ದು ಎನಿಸುವುದಾದರೆ ಈ ದಲಿತ ಜನರಲ್ಲಿ ಮಾತ್ರ ಅದು ಅವರ ಉಸಿರಾಡುವ ಸಂದರ್ಭ ಎಣಿಸುವಷ್ಟು ಸಹಜವಾಗಿರುತ್ತದೆ. ಎಂದು ಹೇಳುವ ಹಾಗೆಯೇ ಚಿನ್ನಸ್ವಾಮಿ ಅವರು ನಾಟಕಗಳನ್ನು ವೈಶಿಷ್ಟತೆಯಿಂದ ತಮ್ಮ ಬದುಕಿನ ಅನುಭವಗಳ ತಾವು ಅನುಭವಿಸಿದ ನೋವುಗಳು ಇಲ್ಲಿ ನಾಟಕಗಳಾಗಿ ರೂಪ ಪಡೆದುಕೊಂಡಿವೆ.

ಇವರ ನಾಟಕಗಳಲ್ಲಿ ಹೆಚ್ಚಾಗಿ ಸಮಾಜದ ಶಿಸ್ತನ್ನು ಗೌರವವನ್ನು ಕಾಪಾಡುವ ಪೊಲೀಸ್, ವೈದ್ಯರು ವಕೀಲರು, ಇನ್ನು ಮೊದಲಾದ ಪ್ರತಿನಿಧಿಗಳೇ ಸಮಾಜದ ಸ್ವಸ್ಥ್ಯವನ್ನು ಹಾಳು ಮಾಡುವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ರಕ್ಷಕರೇ ಭಕ್ಷಕರಾಗುವ ದುಸ್ಥಿತಿ ಇಂದು ಸಮಾಜದಲ್ಲಿ ರೂಪ ಪಡೆದುಕೊಳ್ಳುತ್ತಿದೆ. ಜಾತೀಯ ಕ್ರೂರ ಮುಖದ ಪರಿಕಲ್ಪನೆ ಇವರ ನಾಟಕಗಳಲ್ಲಿ ಮೂಡಿಬಂದಿದೆ. ಇವರ ಎಲ್ಲಾ ನಾಟಕಗಳನ್ನು ಅವಲೋಕಿಸಿದಾಗ ನನಗೆ ಕಾಣಿಸಿದ ಸತ್ಯವೆಂದರೆ ಕವಿಯ ಸಾಮಾಜಿಕ ಕಳಕಳಿ ದೀನ ದಲಿತರ ಶೋಷಣೆ ಧಾರ್ಮಿಕತೆ, ಆರ್ಥಿಕತೆ, ಸಮುದಾಯದ ಸಮಸ್ಯೆಗಳನ್ನು ಮತ್ತಷ್ಟು ಉಲ್ಬಣಗೊಳಿಸಿವೆ ಬೆಕ್ಕು ನಾಯಿಗಳಂತೆ ಪ್ರಾಣಿ ಜೀವ ಸಂಕುಲಗಳಿಗೆ ತೋರಿಸುವ ಮಾನವೀಯ ನೆಲೆ ಇಲ್ಲದ ಸ್ಥಿತಿಗೆ ಇಂದು ನಾವು ತಲುಪಿದ್ದೇವೆ ಎಂಬ ನೋವು ಹತಾಶೆ ಇವರ ನಾಟಕದಲ್ಲಿ ಮೂಡಿಬಂದಿದೆ. ನಾಟಕಗಳಲ್ಲಿ ಹಿಂಸಾತ್ಮಕ ಪ್ರತೀಕಾರವಿಲ್ಲ. ನೋವಿದ್ದರೂ ನಿರಾಶೆ ಇಲ್ಲ. ಸಂಕಟದಲ್ಲೂ ಸಹನೆ ಇದೆ, ತುಳಿತಕೊಳ್ಳಗಾದ ಎಲ್ಲಾ ವರ್ಗಗಳ ಬಗ್ಗೆ ಕಾಳಜಿ ಇರುವುದನ್ನು ಕಾಣಬಹುದಾಗಿದೆ. ಅಂತರಮುಖಿ ಸಂವೇದನಾಶೀಲ ಮನಸ್ಸುಳ್ಳ ಚಿನ್ನಸ್ವಾಮಿಯವರ ನಾಟಕಗಳಲ್ಲಿ ಸಮಾಜದ ಎಲ್ಲಾ ಅನಿಷ್ಠ ಪದ್ಧತಿಗಳಿಗೆ ಸ್ಪಂದಿಸುವ ಮತ್ತು ಆ ಮೂಲಕ ಸಮಾಜಕ್ಕೆ ಎಚ್ಚರಿಕೆಯನ್ನು ನೀಡುವಂತಹ ಪ್ರಯತ್ನ ಗೋಚರವಾಗುತ್ತದೆ. ಸಾರ್ವಜನಿಕ ಅಂತಕರಣವನ್ನು ಕಲಕುವಂತಹ ಸ್ಪಂದನ ಗುಣ ಇವರ ನಾಟಕಗಳಲ್ಲಿ ಕಾಣಸಿಗುತ್ತದೆ ಇದರ ಜೊತೆಯಲ್ಲಿ ರಂಗಭೂಮಿ ಮತ್ತು ಯಾವುದೇ ಕಲಾ ಪ್ರಕಾರಗಳ ಮನುಷ್ಯನ ಒಳಿತಿಗಾಗಿ ದುಡಿಯುವ ಪ್ರಕಾರಗಳು ಆದುದರಿಂದ ಕಲೆ ಇಲ್ಲದಿದ್ದರೆ ಸಂಬಂಧದ ಎಳೆಯೇ ತಪ್ಪಿ ಹೋಗುತ್ತದೆ. ನಮಗೆ ತಿಳಿದ ಮಟ್ಟಿಗೆ ಈ ನಾಟಕ ಹಾಗೂ ಬೀದಿ ನಾಟಕಗಳು ಸಮುದಾಯಕ್ಕೆ ಸಾಮಾಜಿಕ ಅರಿವನ್ನು ಮುಟ್ಟಿಸುವ ಮಟ್ಟಿಗೆ ಕೆಲಸ ಮಾಡಿವೆ ಎಂದು ಹೇಳಬಹುದಾಗಿದೆ.

ಮುಂದುವರಿದು ನೋಡುವುದಾದರೆ ಇವರ ಕಥೆಗಳನ್ನು ಗಮನಿಸುವುದಾದರೆ ಕನ್ನಡದಲ್ಲಿ ಐದು ದಲಿತ ಆತ್ಮಕಥೆಗಳು ಬಂದಿವೆ. ಇವುಗಳಲ್ಲಿ ಪ್ರಮುಖವಾಗಿರುವಂತಹ ದಲಿತ ಸಮುದಾಯದ ಆತ್ಮಕಥೆ

ಮೋಹದ ದೀಪ ಇದು ಅಂತರ್ಜಾತಿ ಮದುವೆಯನ್ನಾಧರಿಸಿದ ಒಂದು ಸಾಮಾನ್ಯ ಕಥೆ, ಹೊಲೆಯರ ಬಸವಯ್ಯ, ಶಿವಾಚಾರದ ದೇವೀರಿ, ಇವರಿಬ್ಬರ ನಡುವೆ ಪ್ರೇಮ ಕೊನೆಯಲ್ಲಿ ಮದುವೆಯಾಗಿ ಮುಕ್ತಾಯವಾಗುತ್ತದೆ. ಬಾಯಿ ಬಾರದ ಮೂಕ ಜೀತಗಾರ ಬಸವನ್ನು ತನ್ನ ಹೋರಿಯನ್ನು ತಿನ್ನುವ ಪ್ರಸಂಗ ಬಂದಾಗ ಹೌಹಾರುವುದು ಇವನ್ನು ಮೂಕ ಪ್ರಾಣಿಯಂತೆ ಇರುವ ಪರಿಯನ್ನು ದಲಿತರ ಸಂವೇದನೆಯನ್ನು ಈ ಕಥೆ ಕಟ್ಟಿಕೊಡುತ್ತದೆ. ಈ ಮೋಹದ ದೀಪ ಸಂಕಲನದಲ್ಲಿ ಎಂಟು ಕಥೆಗಳಿವೆ. ಇಲ್ಲಿ ಬರುವಂತಹ ದಲಿತರ ಪಾಡು ಶೋಷಣೆ, ಜಾತಿ ಪದ್ಧತಿ, ಮೇಲು–ಕೀಳು ಎಂಬುವಂತಹ ಭಾವನೆಗಳ ವಿರುದ್ಧ ಸಿಡಿದೆದ್ದು ನಿಂತ, ಒಂದು ಸಮುದಾಯದ ಪ್ರಜ್ಞೆಯನ್ನು ನೆನಪಿಸುವಂತಹ ಕಥೆಗಳನ್ನು ಚಿನ್ನಸ್ವಾಮಿ ಅವರು ಕಟ್ಟಿಕೊಟ್ಟಿದ್ದಾರೆ. ಅವಸ್ಥಾಂತರದಲ್ಲಿ ಬರುವ ವಿದ್ಯಾರ್ಥಿಯಾದ ದೇಸಾಯಿ ದೇಶದ ಸಮಸ್ಯೆಗಳ ವಿರುದ್ಧ ನಿಂತು ನಿವಾರಣೆ ಮಾರ್ಗವನ್ನು ಅನುಸರಿಸಲು ನಕ್ಸಲೆಟ್ ಆಗಿರುವಂತಹದ್ದು. ನಾನು ಅವ್ವ ಮತ್ತು ಕಾಗೆ ಗ್ರಾಮೀಣ ಪ್ರದೇಶದಲ್ಲಿ ನಡೆಯುವಂತಹ ಮೂಢನಂಬಿಕೆಗಳನ್ನು ಪ್ರಸ್ತಾಪಿಸುತ್ತದೆ. ಹೊಸ ಮೇಷ್ಟರನ ವೃತ್ತಿ ಪ್ರಸಂಗದಲ್ಲಿ ಹೊಸದಾಗಿ ಶಾಲಾ ಶಿಕ್ಷಕನಾಗಿ ಸೇರಿದ ದಲಿತ ಯುವಕನ ತೊಂದರೆಗಳನ್ನು ಪ್ರತಿಬಿಂಬಿಸುತ್ತದೆ. ಗ್ರಾಮೀಣ ಭಾಗಗಳಲ್ಲಿ ಇಂದು ಅನುಭವಿಸುತ್ತಿರುವ ಮೇಲ್ವರ್ಗದ ದಬ್ಬಾಳಿಕೆ ಕಟ್ಟುಪಾಡುಗಳ ವಿರುದ್ಧ, ದಲಿತಾಚರಣೆ ಮತ್ತು ದಲಿತರ ಒಳ ನೋವುಗಳನ್ನು ಹೊರೆಹಚ್ಚಿ ನೋಡುವಂತಹ ಪ್ರಮುಖ ಕಥೆಯಾಗಿದೆ. ದ್ಯಾವರ ಕೇಳುವವರು ಎಂಬ ಕಥೆಯ ಸಾರಾಂಶವು, ವಿಭಿನ್ನ ನೆಲೆಯಲ್ಲಿ ನಿಂತು ಪ್ರಸ್ತುತ ದಿನಗಳಲ್ಲಿ ನೋಡಬಹುದಾಗಿದೆ. ದೇವರು ಮೈಮೇಲೆ ಬರುತ್ತದೆಂದು ಹಳ್ಳಿಯ ಜನರನ್ನು ನಂಬಿಸಿ ಅವರನ್ನು ಮೂಢನಂಬಿಕೆಯ ಮಾಯಾಜಾಲದ ಒಳಗೆ ನರಳುವಂತೆ ಮಾಡುವ ಪೂಜಾರಿಗಳು ಇವರ ತೆವಲಿಗೆ ಬಲಿಯಾದ, ಕೆಂಚನ ಹೆಂಡತಿ ಪುಟ್ಟಿಯ ನೆರಳ ಸುತ್ತ ಈ ಕಥೆ ಸುತ್ತುತ್ತದೆ. ಗಣಪನ ಸ್ವಗತ ಎಂಬುದರಲ್ಲಿ ಗಣೇಶನ ಹಬ್ಬದ ಹಿನ್ನೆಲೆಯಲ್ಲಿ ನಡೆಯುವಂತಹ ಜಾತಿ ಸಂಘರ್ಷ ಮತ್ತು ದಲಿತರು ಅವರ ಬೀದಿಗಳಲ್ಲಿ ಮಾತ್ರ ಉತ್ಸವ ಮಾಡಬೇಕು ಎನ್ನುವಂತಹ ವ್ಯವಹಾರಗಳ ಮೂಲಕ ನಡೆಯುವಂತಹದ್ದು. ಇದರ ನಡುವೆ ಉತ್ಸವದಲ್ಲಿ ದೇವರ ಕಾಣಿಕೆಯ ಹಣದಲ್ಲಿ ಧೂಮಪಾನ ಮದ್ಯಪಾನ ಮಾಡಿ ದೇವರಿಗೆ ಅಪಮಾನ ಮಾಡುವುದು, ಕೊನೆಯಲ್ಲಿ ನೀರಿನಲ್ಲಿ ಮುಳುಗಿಸಿ ಕೈ ತೊಳೆದುಕೊಳ್ಳುವಂತಹ ಸ್ಥಿತಿಯನ್ನು ಈ ಕಥೆ ಪ್ರತಿನಿಧಿಸುತ್ತದೆ.

ಅಜ್ಜನಿಗೆ ಬಿದ್ದ ಮೋಡದ ಕನಸು ಇದು ಗ್ರಾಮೀಣ ಭಾಗದಲ್ಲಿ ಮಳೆಗಾಗಿ ದೇವರ ಮೊರೆ ಹೋಗಿ ಅಟ್ಟುಗುಂಜಿ ಕಪ್ಪೆಗಳಿಗೆ ಮದುವೆ ಮಾಡಿಸುವುದು ಮಳೆ ಬರಲಿ ಎಂದು ದೇವರ ಸೇವೆಯನ್ನು ಮಾಡುವುದು ಹರಿಸೇವೆ ಮುಂತಾದ ಪದ್ಧತಿಗಳನ್ನು ಆಚರಣೆಗಳನ್ನು ಒಳಗೊಂಡಿರುವಂತಹ ಕಥಾ ಭಾಗವಾಗಿದೆ,

ಇಡಿಯಾಗಿ ಈ ಸಂಕಲನ ದಲಿತರ ಹುಟ್ಟಿನಿಂದ ಸಾವಿನವರೆಗೂ ನಡೆಯುವಂತಹ ದಿನಚರಿಯನ್ನು ನೆನಪಿಸುತ್ತದೆ ದಲಿತರು ಜೀವನದಲ್ಲಿ ಅನುಭವಿಸಿದ ಅವಮಾನಗಳು ಜೀತ ಪದ್ಧತಿ ಮೇಲು–ಕೀಳು ಎಂಬ ಭಾವನೆಯನ್ನು ಸಮುದಾಯದ ಏಳಿಗೆಯನ್ನು ತೋರಿಸುವಂತಹ ಕನ್ನಡಿಯಂತಹ ಗಾಜಿನ ಪ್ರತಿಬಿಂಬದ ಕಥೆಯಾಗಿದೆ.

ಇವರ ಮುಂದಿನ ಭಾಗದ ಪಾಪಪ್ರಜ್ಞೆ ಕಥಾ ಸಂಕಲನ ಇದರಲ್ಲಿ ಪಾಪ ಪ್ರಜ್ಞೆ ಕಥೆಯು ಸೇರಿಕೊಂಡಿದೆ ಕೆಳ ಜಾತಿಗೆ ಸೇರಿದ ಕಥಾನಾಯಕನ ವೃತ್ತಿ ಮತ್ತು ಸ್ಥಿತಿಯನ್ನು ಈ ಕಥೆ ಕಟ್ಟಿಕೊಡುತ್ತದೆ. ಪಾದರಕ್ಷೆ ರಿಪೇರಿ ಮಾಡುವವರಿಗೆ 20 ವರ್ಷದಲ್ಲಿ ಮಾಡಿದ ಅವಮಾನ ಈಗ ಪಾಪಪ್ರಜ್ಞೆಯಾಗಿ ಕಾಡುತ್ತಿದೆ. ವ್ಯಕ್ತಿಯಲ್ಲಿ ತನ್ನನ್ನು ತಾನೇ ಶೋಧಿಸಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿರಬೇಕು ಎನ್ನುವ ಯು.ಆರ್ ಅನಂತಮೂರ್ತಿಯವರ ಮಾತಿಗೆ ಸಾಕ್ಷಿ ಎನ್ನುವಂತಿದೆ, ನಿಯೋಗ ಕತೆಯಲ್ಲಿ ಸಮಾಜವು ವ್ಯಕ್ತಿಯ ಸ್ವಂತಹ ಬದುಕನ್ನು ಹೇಗೆ ನಾಶಮಾಡುತ್ತದೆ. ನಪುಂಸಕ ಕಥಾನಾಯಕ ಅವನ ಹೆಂಡತಿ ಮಗು ಬೇಕೆಂಬ ಆಸೆಯಿಂದ ನಿಯೋಗ ಪದ್ಧತಿಗೆ ಒಳಗಾಗಿ ಮಗು ಪಡೆಯುತ್ತಾಳೆ. ಇದರಲ್ಲಿ ಅತ್ತೆಯ ಆಕ್ಷೇಪವಿಲ್ಲ, ಏಕೆಂದರೆ ಅವಳು ಅದೇ ರೀತಿಯಾಗಿ ಮಗು ಪಡೆದಿರುತ್ತಾಳೆ. ಸಮಾಜಕ್ಕೆ ಹೆದರಿ ಹೆಂಡತಿಯನ್ನು ಕೊಲೆ ಮಾಡುವಂತಹ ಅವನ ಹೇಯ ಕೃತ್ಯ ಈ ಕಥೆಯಲ್ಲಿ ವ್ಯಕ್ತವಾಗಿದೆ. ನಂತರದ ಕಥಾ ಭಾಗ 'ಹೀಗೊಂದು ಪ್ರಕರಣ' ಇದು ಗ್ರಾಮೀಣ ಭಾಗದ ಒಳ ರಾಜಕೀಯ ಕೆಳವರ್ಗದವರು ರಾಜಕೀಯ ಪ್ರವೇಶದ ಸಂದರ್ಭದಲ್ಲಿ ಜಾತೀಯತೆ, ಆಸೆ ಮಾನವ ದೌರ್ಬಲ್ಯಗಳನ್ನು ಎಲ್ಲವನ್ನು ಒಂದು ಮುಷ್ಟಿಯಲ್ಲಿ ಹಿಡಿದಿಟ್ಟ ಕಥೆಯಾಗಿದೆ.

ಅಣ್ಣಾಜಿ ಮತ್ತು ನೀಲಿ ಬಾವುಟಗಳು ಅನುವಾದಿತ ಕಥೆಗಳಾಗಿವೆ ಜಾತಿಯಲ್ಲಿ ಬೇರೆರೊಬ್ಬನನ್ನು ಅಣ್ಣ ಎಂದು ಕರೆದಿದೆ. ಅಪರಾಧವಾಗುವ ಪ್ರಸಂಗ ಉದ್ಭವವಾಗುತ್ತದೆ. ಅಂತರ್ಜಾತೀಯ ಪ್ರೇಮವು ರಕ್ತದೋಕುಳಿಯಲ್ಲಿ ಬೆಂದು ಹೋಗುವ ನಾನಾ ಮುಖಗಳನ್ನು ಹೊರ ಸೂಸುತ್ತದೆ. ಇದರಿಂದ ಜಾತಿಯ ಹಿನ್ನೆಲೆಯಲ್ಲಿ ದಲಿತ ಸಂಘ ಪಕ್ಷಗಳ ಆಗಮನವನ್ನು ಈ ನೀಲಿ ಬಾವುಟಗಳು ಕಥೆಯಲ್ಲಿ ಕಾಣಬಹುದಾಗಿದೆ.

ಕೊನೆಯ ಅಧ್ಯಾಯವಾದ ಪ್ರಬಂಧ ಮತ್ತು ಲೇಖನಗಳು ಮಾತು 'ಮಂಥನ' ಎಂಬ ಎರಡು ಭಾಗಗಳಾಗಿವೆ ವಿವಿಧ ಸಂಘಟನೆಗಳು ಏರ್ಪಡಿಸಿದ ಸಮಾರಂಭಗಳಲ್ಲಿ ಮಾಡಿದ ಭಾಷಣಗಳು ಮೊದಲರ್ಧದಲ್ಲಿ ನಂತರದಲ್ಲಿ ಆಕಾಶವಾಣಿ ಕೇಂದ್ರಗಳ ಚಿಂತನ ಕಾರ್ಯಕ್ರಮಗಳಲ್ಲಿ ವಿಸ್ತರಗೊಂಡ ಬರಹಗಳು ಎರಡನೇ ಭಾಗದಲ್ಲಿವೆ. ಯಾವುದೇ ಧರ್ಮವಿರಲಿ ಅದರಲ್ಲಿ ಮನೆಮಾಡಿಕೊಂಡಿರುವಂತಹ ಜಾತಿ ಪದ್ಧತಿ ಆಚರಣೆ ನಂಬಿಕೆ ಇವುಗಳ ವಿರುದ್ಧ ಚಿನ್ನಸ್ವಾಮಿಯವರು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ ದಲಿತರಿಗೆ ಅಂಟಿರುವಂತಹ ಅಸ್ಪೃಶ್ಯತೆ ಪಾಶದಿಂದ ಮುಕ್ತಿ ಹೊಂದಲು ಚರಿತ್ರೆಯಲ್ಲಿ ಬೇಕಾದಷ್ಟು

ಹೋರಾಟಗಳು ಪ್ರಯತ್ನಗಳು ನಡೆದಿದ್ದರೂ ಫಲಕಾರಿಯ ಆಗಿಲ್ಲ. ಉಳಿದಿರುವ ದಾರಿ ಎಂದರೆ ಮತಾಂತರ ಒಂದೇ ಎಂದು ಸಾರಿ ಸಾರಿ ಲೇಖಕರು ಹೇಳಿದ್ದಾರೆ.

ಬುದ್ಧ ಬಸವ ಅಂಬೇಡ್ಕರ್‌ರ ಹಾದಿಯಲ್ಲಿ ಸಾಗಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಕೊಂಡಿದ್ದಾರೆ ಸಾಹಿತ್ಯ, ಸಂಸ್ಕೃತಿ, ಸಮಾಜ, ವಿಜ್ಞಾನ, ಆರ್ಥಿಕತೆ, ಮುಂತಾದ ಕ್ಷೇತ್ರಗಳ ಕೆಲವು ಪ್ರಶ್ನೆಗಳನ್ನು ಎತ್ತಿಕೊಂಡು ಪರಾಮರ್ಶೆ ನಡೆಸಿರುವುದನ್ನು ಇಲ್ಲಿಯ ಲೇಖನಗಳಲ್ಲಿ ಕಾಣಬಹುದಾಗಿದೆ. ನೋಂದವರು ನೊವು ಶೀರ್ಷಿಕೆ ಕೂಡ ಅಕ್ಕಮಹಾದೇವಿಯ ಸಾಲು "ನೊಂದವರ ನೋವನ್ನು ನೊಯದವರೆತ್ತಬಲ್ಲರು" ಚೆನ್ನಮಲ್ಲಿಕಾರ್ಜುನ ಎಂಬ ಆಧ್ಯಾತ್ಮದ ಹಸಿವಿನ ಮಾತುಗಳು ಇವು ದಲಿತ ಲೋಕದ ನೋವುಗಳು ಅಷ್ಟು ಸುಲಭವಾಗಿ ಅರ್ಥವಾಗದ ಒಳ ಸುಳಿಗಳನ್ನು ಒಳಗೊಂಡಿರುತ್ತವೆ.

ನೊಂದವರ ನೋವು ಕೃತಿಯ ಬಗ್ಗೆ ಶ್ಯಾಮಸುಂದರ ಬಿದರಕುಂದಿ ಅವರು ಬಹಳ ಒಳ್ಳೆಯ ಮಾತುಗಳನ್ನು ಬರೆದಿದ್ದಾರೆ ನೊಂದವರ ಅಳಲನ್ನು ಮಂದ್ರಸ್ವರದಲ್ಲಿ ಹಾಡುವ ಕವಿ ಚಿನ್ನಸ್ವಾಮಿ ಅಂತ ಇವರು ವಾಗ್ಮಿತೆಯ ಪ್ರದರ್ಶನವಲ್ಲದ ವಾಸ್ತವದ ಬಗೆಗೆ ಕಾಳಜಿ ಅರಳುಗಟ್ಟಿದ ಚಿಂತನೆ ದಲಿತರ ದನಿ ಧೋರಣೆಗಳು ಪಡೆದೇ ಪಡೆಯಬೇಕಾದ ಆಯಾಮಗಳನ್ನು ಕುರಿತು ಬರೆದಿದ್ದಾರೆ. ಇದರ ಮುಂದುವರಿದ ಭಾಗವಾದ ಒಂದು ಕೊಡ ಹಾಲಿನ ಸಮರ ಚಿನ್ನುಡಿ ಪರಿಮಿತದ ಕತ್ತಲೆ ಹೆಚ್ಚುವರಿ ಲೇಖನಗಳು ಈ ಭಾಗದಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಜ್ಯೋತಿಬಾಪುಲೆ ಮುಂತಾದ ಸಮಾಜ ಸುಧಾರಕರ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಪ್ರಬಂಧ ಮತ್ತು ಲೇಖನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಇವರ ಲೇಖನಗಳಲ್ಲಿ ವರ್ತಮಾನದ ಧಾವಂತಗಳು ತುಂಬಾ ಸರಳ ಮತ್ತು ಸ್ಪಷ್ಟವಾಗಿ ಅನಾವರಣಗೊಂಡಿವೆ. ಈ ಲೇಖನಗಳನ್ನು ಒಟ್ಟಾರೆಯಾಗಿ ನೋಡಿದಾಗ ಚಿಂತನೆಗಳ ಬೆಳಕಿನಲ್ಲಿ ಬೇರೊಂದು ನಾಗರಿಕತೆಯನ್ನು ಕಟ್ಟುವ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವ ಆಶಯವಿದೆ 21ನೆಯ ಶತಮಾನದಲ್ಲಿಯೂ ಅಸ್ಪೃಶ್ಯತೆ, ಜಾತಿ ಪದ್ಧತಿ, ವರ್ಗ ತಾರತಮ್ಯಗಳು ಭಾರತೀಯ ಸಾಮಾಜಿಕ ಸಂರಚನೆಯ ಮೂಲಾಧಾರಗಳಾಗಿ ಇವೆ. ಇಂತಹ ಶ್ರೇಣೀಕರಣ ವ್ಯವಸ್ಥೆಯು ಬೇರೆ ಬೇರೆ ಅಧಿಕಾರ ಕೇಂದ್ರಗಳ ಮೂಲಕ ಸಾಂಸ್ಥಿಕವಾಗಿ ಘೋಷಣೆಯಾಗುವುದನ್ನು ಈ ಕೃತಿಯು ಬಹುತೇಕ ಲೇಖನಗಳು ಪ್ರಶ್ನಿಸುತ್ತವೆ. ಅದರಂತೆ ಚರ್ಚೆ, ಸಂವಾದ, ವಾಗ್ವಾದಗಳಿಗೆ ಆಹ್ವಾನ ನೀಡುವಂತಿದೆ. ಬೌದ್ಧ ಚಿಂತನೆಯ ವಿಭಿನ್ನ ಆಯಾಮಗಳನ್ನು ಜನಸಾಮಾನ್ಯರಿಗೆ ಮನಮುಟ್ಟುವ ರೀತಿಯಲ್ಲಿ ನಿದರ್ಶನಗಳ ಮೂಲಕ ಪರಿಚಯಿಸಿದ್ದಾರೆ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯದಲ್ಲಿ ದಲಿತ ಸಂವೇದನೆ ಯಾವ ರೀತಿ ಅನಾವರಣಗೊಂಡಿದೆ ಎಂಬ ಅಂಶಗಳನ್ನು ಶೋಧಿಸುವ ನೆಲೆಯಲ್ಲಿ ಈ ಅಧ್ಯಯನವು ಮುಖ್ಯವಾಗುತ್ತದೆ.

ಅಧ್ಯಯನದ ಫಲಿತಗಳು:

"ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯದಲ್ಲಿ ದಲಿತ ಸಂವೇದನೆಯ ನೆಲೆಗಳು" ಎಂಬ ಸಂಶೋಧನಾ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತಾವನೆ ಮತ್ತು ಉಪಸಂಹಾರವನ್ನು ಹೊರತುಪಡಿಸಿ ಐದು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದ್ದು, ಕಂಡುಕೊಂಡ ಫಲಿತಾಂಶಗಳನ್ನು ಅಧ್ಯಯವಾರು ಇಲ್ಲಿ ಮಂಡಿಸಲಾಗಿದ. ಈ ಅಧ್ಯಯನವೂ ಚಿನ್ನಸ್ವಾಮಿಯವರ ಒಟ್ಟು ಸಾಹಿತ್ಯದಲ್ಲಿ ಸಂವೇದನೆಯನ್ನು ಗುರುತಿಸುವ ಕೆಲಸವನ್ನು ನಿರ್ವಹಿಸುತ್ತದೆ. ಇವರ ಕಾವ್ಯ, ನಾಟಕ, ಕಥೆ, ಲೇಖನ, ಪ್ರಬಂಧ, ಕವನ ಇವುಗಳಲ್ಲಿ ಬರುವಂತಹ ದಲಿತರ ಬದುಕಿನ ನೋವು, ಹತಾಶೆ, ಧಾರ್ಮಿಕತೆ, ಜಾತಿ, ಪದ್ಧತಿ, ಸಾಮಾಜಿಕ ಪದ್ಧತಿ, ಸಾಂಸ್ಕೃತಿಕತೆ, ಧಾರ್ಮಿಕ, ಆಚರಣೆ, ಜೀತ ಪದ್ಧತಿ ಮುಂತಾದ ಆಶಯಗಳನ್ನು ವ್ಯಕ್ತಪಡಿಸುತ್ತದೆ ಒಟ್ಟಿನಲ್ಲಿ ಮಹಾ ಪ್ರಬಂಧದ ವಿಷಯ ಪ್ರಧಾನವಾಗಿ ಸಂವೇದನೆಯ ನೆಲೆಗಳನ್ನು ಗುರುತಿಸುವಂತಹದಾಗಿದೆ. ಇದನ್ನು ಶೋಧಿಸಿದಾಗ ಕಂಡುಕೊಂಡ ಫಲಿತಾಂಶಗಳು ಹೀಗಿವೆ.

1. ಮೂಡ್ನಾಕೂಡು ಚಿನ್ನಸ್ವಾಮಿಯವರ ಬರೆಹಗಳಲ್ಲಿ ದಲಿತ ಬದುಕಿನ ನೋವಿನ ಚಿತ್ರಣ ಸಾಧೃಶ್ಯಪೂರ್ವಕವಾಗಿ ಚಿತ್ರಣಗೊಂಡಿದೆ.
2. ಅವರ ಶೀರ್ಷಿಕೆಗಳನ್ನು ಗಮನಿಸುವುದರಿಂದ ನಮಗೆ ತಿಳಿಯುವುದೇನೆಂದರೆ ದಲಿತರ ಮನದಾಳದ ನೋವುಗಳಿಗೆ ರೂಪಕಗಳನ್ನು ನೀಡಿ ಅವಮಾನಗಳಿಂದ ನರಳುತ್ತಿರುವ ದಲಿತ ಸಮುದಾಯವನ್ನು ಎಚ್ಚರಿಸುವ ಕೆಲಸವನ್ನು ಮಾಡಿದ್ದಾರೆ.
3. ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಮ.ನ.ಜ., ಅರವಿಂದ ಮಾಲಾಗತ್ತಿ ಇವರುಗಳ ಬರಹದಲ್ಲಿನ ಅಸಮಾನತೆ, ದಾರಿದ್ರ್ಯ, ಮೂಢನಂಬಿಕೆ ಮೊದಲಾವುಗಳ ವಿರುದ್ಧ ಹೋರಾಟವನ್ನು ಕಾಣಬಹುದು. ಇದನ್ನು ಮೀರಿದ ದಲಿತ ಬದುಕಿನ ವಿವರಗಳು ಇವರ ಕಾವ್ಯದಲ್ಲಿ ಕಾಣಬಹುದು.
4. ಅವರ ಕಾವ್ಯದ್ದುದ್ದಕ್ಕೂ ಬೌದ್ಧ ತಾತ್ವಿಕತೆಯನ್ನು ಅನುಸರಿಸಿ ಕಾವ್ಯ ರಚಿಸಿರುವುದನ್ನು ಕಾಣಬಹುದು. ಅವರ ನಡೆನುಡಿಯಲ್ಲಿ ಬುದ್ಧನನ್ನು ಅನುಕರಿಸಿದ್ದಾರೆ ಮತ್ತು ಅದೇ ಹಾದಿಯಲ್ಲಿ ಸಾಗಿದ ಕವಿಯಾಗಿದ್ದಾರೆ.
5. ಬೌದ್ಧ ಧರ್ಮದ ಪರಿಕಲ್ಪನೆಯು ಕರ್ನಾಟಕದಲ್ಲಿ ಅಂತ್ಯ ಕಾಣುವುದನ್ನು ಕೊನೆಗಾಣಿಸಲು ಸಾಧ್ಯವಿಲ್ಲ ಎಂಬುವುದನ್ನು ಮೂಡ್ನಾಕೂಡು ಚಿನ್ನಸ್ವಾಮಿಯವರು ಬಹುತ್ವ ಭಾರತ ಹಾಗೂ ಬೌದ್ಧ ತಾತ್ವಿಕತೆಯೆಂಬ ಕೃತಿಯನ್ನು ಹೊರ ತರುವುದರ ಮೂಲಕ ಹೇಳಿದ್ದಾರೆ. ಕನ್ನಡದ ಬೌದ್ಧ ತಾತ್ವಿಕತೆಯನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಾರೆ.

6. ಇವರ ಬರಹಗಳಲ್ಲಿ ವ್ಯವಸ್ಥೆಯ ಬಗ್ಗೆ ಅತಿಯಾದ ಆಕ್ರೋಶ, ಸಿಟ್ಟಿನ ಬದಲು ತಣ್ಣನೆಯ ಬಂಡಾಯ ಅನಾವರಣಗೊಂಡಿದೆ.
7. ಶಿಕ್ಷಿತ ದಲಿತ ಸಮುದಾಯಗಳು ಇಂದಿಗೂ ಎದುರಿಸುತ್ತಿರುವ ಸಾಮಾಜಿಕ ಸಮಸ್ಯಗಳ ಬಗ್ಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.
8. ಸಾಂವಿಧಾನಿಕ ಹಕ್ಕುಗಳ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗೋಪಾಯಗಳು ಇವರ ಬರಹಗಳಲ್ಲಿ ಕಂಡು ಬರುತ್ತದೆ.
9. ಅಸ್ಪೃಶ್ಯತೆ ಜೀತ ಪದ್ಧತಿ ಇಂದಿಗೂ ಕೆಲವು ಪ್ರದೇಶಗಳಲ್ಲಿ ಇರುವುದನ್ನು ಗುರುತಿಸಿ ಅದರಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದ್ದಾರೆ.
10. ಹಿಂದುಳಿದ ಜಿಲ್ಲೆಯಿಂದ ಬಂದಿರುವ ಇವರು ದಲಿತರ ಹಸಿಹಸಿ ನೋವುಗಳನ್ನು ಸ್ವತಃ ತಾವೇ ಅನುಭವಿಸಿದ್ದರಿಂದ ಮೇಲೆ ಬರಲು ಪ್ರಯತ್ನಿಸುತ್ತಿರುದನ್ನು ಇವರ ಕವನಗಳಲ್ಲಿ ಕಾಣಬಹುದಾಗಿದೆ.
11. ಬೌದ್ಧ ಧರ್ಮವನ್ನು ಅಪ್ಪಿಕೊಂಡು ಜಾತಿ, ಅಸ್ಪೃಶ್ಯತೆ, ದಾರಿದ್ರ್ಯ ಮೂಢನಂಭಿಕೆ ಮೊದಲಾದ ಅನಿಷ್ಠ ಪದ್ಧತಿಗಳಿಂದ ಬಿಡುಗಡೆಹೊಂದಬೇಕೆಂದು ಯುವ ಸಮುದಾಯಕ್ಕೆ ಸಂದೇಶವನ್ನು ನೀಡಿದ್ದಾರೆ.
12. ಮುಡ್ನಾಕೂಡು ಎಂಬ ಕುಗ್ರಾಮದಿಂದ ಬಂದು ದಲಿತರ ನೋವು ಹಸಿವು ಇನ್ನು ಮುಂತಾದ ವಿಷಯಗಳನ್ನೊಳಗೊಂಡು ಕಾವ್ಯ ರಚಿಸಿ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲೂ ಇವರು ಲೇಖನಗಳು ಅನುವಾದಗೊಂಡು ಪ್ರಕಟವಾಗಿದೆ.
13. ಇವರ ನಾಟಕದಲ್ಲಿ ಬರುವಂತಹ ಜಾತಿ ವ್ಯವಸ್ಥೆ ಇನ್ನು ಮೊದಲಾದ ವಿಷಯಗಳಲ್ಲಿ ದಲಿತರು ಅನುಭವಿಸಿದ ನೋವು ಕೊನೆಗೊಳ್ಳಬೇಕೆಂಬ ಆಶಯವಿದೆ.

ಅಧ್ಯಾಯನದ ಸಾಧ್ಯತೆಗಳು:

1. ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷಗಳು
2. ಮೂಡ್ನಾಕೂಡು ಚಿನ್ನಸ್ವಾಮಿಯವರ ಕಥಾ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆ
3. ಮೂಡ್ನಾಕೂಡು ಚಿನ್ನಸ್ವಾಮಿಯವರ ಲೇಖನಗಳಲ್ಲಿ ವೈಚಾರಿಕ ಪ್ರಜ್ಞೆ
4. ಮೂಡ್ನಾಕೂಡು ಕವನಗಳಲ್ಲಿ ಜೀತ ಪದ್ಧತಿಯ ಕರಾಳ ಮುಖದ ಅನಾವರಣ
5. ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯದಲ್ಲಿ ದಲಿತ ಜಗತ್ತಿನ ಪರಿಕಲ್ಪನೆ

6. ಮೂಡ್ನಾಕೂಡು, ದೇವನೂರು, ಮೊಗಳ್ಳಿ ಗಣೇಶ್, ಸೋಮಣ್ಣ ಹೊಂಗಳ್ಳಿ, ಇವರ ಕಥೆಗಳ ತೌಲನಿಕ ಅಧ್ಯಯನ.

7. ಮೂಡ್ನಾಕೂಡರ ಲೇಖನ ಮತ್ತು ಪ್ರಬಂಧಗಳಲ್ಲಿ ಬೌದ್ಧ ಧರ್ಮ ಆಶಯ ಒಂದು ಅಧ್ಯಯನ.

8. ಮೂಡ್ನಾಕೂಡು ಚಿನ್ನಸ್ವಾಮಿ ಅವರ ನಾಟಕದಲ್ಲಿ ದಲಿತರ ಪ್ರತಿನಿಧೀಕರಣ

9. ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ದಲಿತೇತರ ಲೇಖಕರೊಂದಿಗೆ ಕಥೆ, ಕವನ ಸಂಕಲನ, ನಾಟಕಗಳ ಒಂದು ಅಧ್ಯಯನ

10. ಮೂಡ್ನಾಕೂಡು ಚಿನ್ನಸ್ವಾಮಿ ಜೊತೆಗೆ ಪ್ರಸ್ತುತ ತಲೆಮಾರಿನ ದಲಿತ ಲೇಖಕರ ತೌಲನಿಕ ಅಧ್ಯಯನ.

ಅಭ್ಯಾಸ ಸೂಚಿ

ಆಕರ ಗ್ರಂಥಗಳು

1 ಮೂಡ್ನಾಕೂಡು ಚಿನ್ನಸ್ವಾಮಿ, ಸಮಗ್ರ ಸಾಹಿತ್ಯ ಸಂಪುಟ 1 – ಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2018.

2 ಮೂಡ್ನಾಕೂಡು ಚಿನ್ನಸ್ವಾಮಿ, ಸಮಗ್ರ ಸಾಹಿತ್ಯ ಸಂಪುಟ 2 – ಕಥೆ ಮತ್ತು ನಾಟಕಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2018.

3 ಮೂಡ್ನಾಕೂಡು ಚಿನ್ನಸ್ವಾಮಿ, ಸಮಗ್ರ ಸಾಹಿತ್ಯ ಸಂಪುಟ 3 – ಪ್ರಬಂಧ–ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2018.

4 ಮೂಡ್ನಾಕೂಡು ಚಿನ್ನಸ್ವಾಮಿ, ಸಮಗ್ರ ಸಾಹಿತ್ಯ ಸಂಪುಟ 4 – ಸಂಕೀರ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2019.

5 ಮೂಡ್ನಾಕೂಡು ಚಿನ್ನಸ್ವಾಮಿ, ಕಂಗಳ ಮುಂದಣ ಕತ್ತಲು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 2018.

6 ಮೂಡ್ನಾಕೂಡು ಚಿನ್ನಸ್ವಾಮಿ, ನೆನಪಿನ ಹಕ್ಕಿಯನ್ನು ಹಾರಲು ಬಿಟ್ಟೆ, (ಆತ್ಮಕಥನ) ಅಂಕಿತ ಪುಸ್ತಕ, ಬೆಂಗಳೂರು, 2020.

7 ಮೂಡ್ನಾಕೂಡು ಚಿನ್ನಸ್ವಾಮಿ, ಮೂಡ್ನಾಕೂಡು ನಾಟಕಗಳು, ಸಚಿನ್ ಗ್ರಾಫಿಕ್ಸ್, ಮೈಸೂರು, 2010.

8 ಮೂಡ್ನಾಕೂಡು ಚಿನ್ನಸ್ವಾಮಿ, ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ, ಲಡಾಯಿ ಪ್ರಕಾಶನ, ಗದಗ, 2018.

ಪರಾಮರ್ಶನ ಗ್ರಂಥಗಳು

1. ಅನುಪಮ. ಎಚ್. ಎಸ್, ಮಹಿಳೆ ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ, 2012.
2. ಅರವಿಂದ ಮಾಲಗತ್ತಿ (ಸಂ), ಸೀಮಾತೀತ, ಕನ್ನಡ ಸಾಹಿತ್ಯ ಚರಿತ್ರೆ ಹೊನ್ನ ಕೋಗಿಲೆ ಸಂಪುಟ–1; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2014.
3. ಅರವಿಂದ ಮಾಲಗತ್ತಿ, ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನಾ ಬುಕ್ ಹೌಸ್ ಅಂಜನಾದ್ರಿ, ಮೈಸೂರು, 1999
4. ಅರವಿಂದ ಮಾಲಗತ್ತಿ, ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 2014.
5. ಅಪ್ಪಗೆರೆ ಸೋಮಶೇಖರ, ಬಯಲ ಬೆಳಕು – ಮೂಡ್ನಾಕೂಡು ಚಿನ್ನಸ್ವಾಮಿಯವರ ಸಾಹಿತ್ಯ ಅನುಸಂಧಾನ, ದೇಸೀ ಪುಸ್ತಕ, ಬೆಂಗಳೂರು, 2010.
6. ಕೃಷ್ಣಮೂರ್ತಿ ಸಿ.ಎನ್. (ಸಂ,ಅನು); ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ರಾಮಮನೋಹರ ಲೋಹಿಯಾ, ಜೀವನ ಹಾಗೂ ಚಿಂತನೆಗಳು, ಇಂದಿರಾ ಪ್ರಕಾಶನ, ಬೆಂಗಳೂರು, 2016.
7. ಕೇಶವಶರ್ಮ ಕೆ, ನೀಲ ನಕ್ಷೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, 2012.
8. ಚಂದ್ರಶೇಖರ ಟಿ.ಆರ್., ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2005.
9. ಚಿನ್ನಸ್ವಾಮಿ ಸೋಸಲೆ ಎನ್., ದಲಿತರ ಬದುಕು–ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಥಮ ಮುದ್ರಣ, 2012.
10. ಚಿನ್ನಸ್ವಾಮಿ ಸೋಸಲೆ ಎನ್., ಕರ್ನಾಟಕದ ಸಮಗ್ರ ದಲಿತ ಚರಿತ್ರೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2016.
11. ಜ ಹೊ ನಾ., ಮನುಸ್ಮೃತಿ ಮತ್ತು ದಲಿತರು, ಲಡಾಯಿ ಪ್ರಕಾಶನ ಗದಗ, 2013.
12. ದೇವರಾಜು ಓ, ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಪಲ್ಲವ ಪ್ರಕಾಶನ ಚನ್ನಪಟ್ಟಣ, 2013.

13. ನಾಗರಾಜ್ ಡಿ. ಆರ್, (ಸಂ) ಅಗ್ರಹಾರ ಕೃಷ್ಣ ಮೂರ್ತಿ, ಸಂಸ್ಕೃತಿ ಕಥನ, ಸಪ್ನ ಬುಕ್ ಹೌಸ್, ಬೆಂಗಳೂರು, 2008.
14. ನಾರಾಯಣ ಸ್ವಾಮಿ ಚಿ., ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ, ನವಜ್ಯೋತಿ ಪ್ರಕಾಶನ, ಬೆಂಗಳೂರು, 2011.
15. ನಾ. ದಿವಾಕರ, ಜಾಗತೀಕರಣ ಮತ್ತು ದಲಿತರು, ಲಡಾಯಿ ಪ್ರಕಾಶನ, ಗದಗ, 2013.
16. ಪುಟ್ಟಯ್ಯ ಬಿ.ಎಂ., ಮುಖಾಮುಖಿ–ಸಮಾಜ ಸಂಸ್ಕೃತಿ ಚಳುವಳಿ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, 2008.
17. ಪೋತೆ ಎಚ್.ಟಿ., ಅಂಬೇಡ್ಕರ್ ಕಥನ, ಕುಟುಂಬ ಪ್ರಕಾಶನ, ಗುಲಬರ್ಗ, 2013.
18. ಪೋತೆ ಎಚ್.ಟಿ., ಅಂಬೇಡ್ಕರ್ ಸಂವೇದನೆ, ಕುಟುಂಬ ಪ್ರಕಾಶನ ಗುಲಬರ್ಗ, 2007.
19. ಮಣಿಪಾಲ ಆರ್ಕೆ, ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ ವಿಮರ್ಶೆ, ಸಮಕ್ರಮಣ ಪ್ರಕಾಶನ, ಧಾರವಾಡ–1, 1995.
20. ಮುನಿವೆಂಕಟಪ್ಪ ವಿ., ದಲಿತ ಚಳವಳಿ ಚರಿತ್ರೆ, ತನುಮನ ಪ್ರಕಾಶನ, ಮೈಸೂರು, 2009.
21. ಮೊಗಳ್ಳಿ ಗಣೇಶ್, ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
22. ಸನತ ಕುಮಾರ ಬೆಳಗಲಿ, ಬ್ರಾಹ್ಮಣವಾದಿ ಭಾರತ v/s ದಲಿತ ಭಾರತ, ಲಡಾಯಿ ಪ್ರಕಾಶನ, ಗದಗ, 2016.
23. ಸಿದ್ಧಲಿಂಗಯ್ಯ, ಊರಿಕಂಡಾಯ, ಅಂಕಿತ ಪುಸ್ತಕ, ಬೆಂಗಳೂರು, 2009.
24. ಸುಜ್ಞಾನ ಮೂರ್ತಿ ಬಿ., ದಲಿತತ್ವ, ಲಡಾಯಿ ಪ್ರಕಾಶನ ಗದಗ; ಎರಡನೇ ಮುದ್ರಣ 2016.
25. ಸುಭಾಷ್ ರಾಜಮಾನೆ, ಮೂಡ್ನಾಕೂಡು ಚಿನ್ನಸ್ವಾಮಿ 65 – ಬಹುತ್ವಕಥನ, ಗೀತಾಂಜಲಿ ಪ್ರಕಾಶನ, ಶಿವಮೊಗ್ಗ, 2019.

ಶ್ರೀನಿವಾಸಮೂರ್ತಿ — **ಪ್ರೊ. ಸೋಮಣ್ಣ ಹೊಂಗಳ್ಳಿ**

ಸಂಶೋಧಕರು — **ಮಾರ್ಗದರ್ಶಕರು**